# ವಾರ್ಡ್ ಮಟ್ಟದ ಲೋಕೋಪಯೋಗಿ ಕಾಮಗಾರಿ, ನಗರ ಯೋಜನೆ ಹಾಗೂ ಮೂಲ ಸೌಕರ್ಯ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ: 18 –05 –2023ರ ನಡವಳಿಗಳು

**ವಿಷಯದ ಸಂಖ್ಯೆ: 537/2022-23**

**ಪ್ರಸ್ತಾವನೆ :**

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ವಾರ್ಡ್ ಸಂಖ್ಯೆ:171 (ಹಳೆ ವಾರ್ಡ 118) ರ ವ್ಯಾಪ್ತಿಯ ಜೆ.ಸಿ. ರಸ್ತೆಯಲ್ಲಿರುವ ಪಾಲಿಕೆಯ ಜಾಗದಲ್ಲಿ ಸುಮಾರು 12558 ಚದರಡಿಗಳ ವಿಸ್ತೀರ್ಣದ ನಿವೇಶನದಲ್ಲಿ ಪಾಲಿಕೆಯ ವತಿಯಿಂದಲೇ ಸುಮಾರು 35 ವರ್ಷಗಳ ಹಿಂದೆ ಕಟ್ಟಡ ನಿರ್ಮಾಣ ಮಾಡಲಾಗಿದ್ದು, ಸದರಿ ಕಟ್ಟಡವು ಪ್ರಸ್ತುತ ಶಿಥಿಲಗೊಂಡಿದ್ದರ ಕಾರಣ, ಸದರಿ ಕಟ್ಟಡಕ್ಕೆ M/s.Bureau Veritas (India) Pvt. Ltd., ರವರು ಸದರಿ ಕಟ್ಟಡವು ವಾಸಕ್ಕೆ ಯೋಗ್ಯವಿಲ್ಲದಿರುವುದರ ಬಗ್ಗೆ ವರದಿಯನ್ನು ನೀಡಿರುತ್ತಾರೆ. ಸದರಿ ಕಟ್ಟಡದ ನೆಲ ಅಂತಸ್ತಿನಲ್ಲಿದ್ದ ಎಲ್ಲಾ ವಾಣಿಜ್ಯ ಮಳಿಗೆಗಳು ಮತ್ತು ಉಳಿದ ಅಂತಸ್ತಿನಲ್ಲಿದ್ದ ಪಾಲಿಕೆಯ ಎಲ್ಲಾ ಕಛೇರಿಗಳನ್ನು ತೆರವುಗೊಳಿಸಲಾಗಿರುತ್ತದೆ.

ಅದರಂತೆ, ದಿನಾಂಕ:22–09–2022ರಂದು ವಲಯ ಆಯುಕ್ತರು (ದಕ್ಷಿಣ) ಮತ್ತು ಮುಖ್ಯ ಅಭಿಯಂತರರು (ದಕ್ಷಿಣ) ರವರು ಸ್ಥಳ ಪರಿಶೀಲನೆ ಮಾಡಿ, ಸ್ಥಳದಲ್ಲಿ ಹಾಲಿ ಇರುವ ಕಟ್ಟಡವನ್ನು ಕೆಡವಿ ಹಾಲಿ ಇರುವ ಕಟ್ಟಡದ ಪಕ್ಕದಲ್ಲಿರುವ ಪಾಲಿಕೆಯ ಖಾಲಿ ಜಾಗವನ್ನು ಸೇರಿಸಿಕೊಂಡು, ಒಟ್ಟು 38,034.00 ಚದರಡಿಗಳ ಜಾಗ ಲಭ್ಯವಿದ್ದು, ಸದರಿ ಜಾಗದಲ್ಲಿ ನೆಲ ಮಹಡಿ ಮತ್ತು Mezzanine ನಲ್ಲಿ ವಾಣಿಜ್ಯ ಸಂಕೀರ್ಣ ಮತ್ತು 1ನೇ, 2ನೇ ಹಾಗೂ 3ನೇ ಮಹಡಿಯಲ್ಲಿ ಬಿ.ಬಿ.ಎಂ.ಪಿ.ಯ ವಿವಿಧ ಕಛೇರಿಗಳು ಹಾಗೂ 4ನೇ ಮತ್ತು 5ನೇ ಮಹಡಿಯಲ್ಲಿ ಕಛೇರಿಗಳು ಜೊತೆಗೆ Auditorium, Art Gallery ಕಟ್ಟಡಗಳನ್ನು ನಿರ್ಮಾಣ ಮಾಡಲು ಯೋಜನಾ ವರದಿಯನ್ನು ತಯಾರಿಸಿ ಯೋಜನಾ ಸಮಾಲೋಚಕರು ಪ್ರಸ್ತಾವನೆ ಮಂಡಿಸಿರುತ್ತಾರೆ.

ಮುಂದುವರೆದಂತೆ, ಪ್ರಸ್ತಾಪಿತ ಕಟ್ಟಡದಲ್ಲಿ ನೆಲ ಮಹಡಿಯಲ್ಲಿ ಹಾಗೂ Mezzanine ನ ಹಂತಸ್ತಿನಲ್ಲಿ ವಾಣಿಜ್ಯ ಸಂಕೀರ್ಣಗಳನ್ನು ನಿರ್ಮಾಣ ಮಾಡಲು ಉದ್ದೇಶಿಸಿ, ಯೋಜನಾ ವರದಿಯನ್ನು ಸಿದ್ದಪಡಿಸಿದ್ದು, ಇದರಿಂದ ಪಾಲಿಕೆಗೆ ಆರ್ಥಿಕ ವರಮಾನವು ಸಹ ವೃದ್ಧಿಯಾಗುತ್ತದೆ ಹಾಗೂ ಪ್ರಸ್ತಾಪಿತ ಕಟ್ಟಡವು ಬಿ.ಬಿ.ಎಂ.ಪಿ.ಯ ಕೇಂದ್ರ ಕಛೇರಿಯ ಸಮೀಪವಿದ್ದು, ಈಗಾಗಲೇ ಕೇಂದ್ರ ಕಛೇರಿಯಲ್ಲಿ ವಿವಿಧ ವಿಭಾಗಗಳ ಕಛೇರಿಗಳಿಗೆ ಹಾಗೂ ವಾಹನ ನಿಲುಗಡೆಗೆ ಸ್ಥಳಾವಕಾಶ ಇಲ್ಲದೇ ಇರುವುದರಿಂದ ಕೇಂದ್ರ ಕಛೇರಿಯು ಅತಿ ಸಮೀಪದಲ್ಲಿರುವ ಕಟ್ಟಡದಲ್ಲಿ ಕಛೇರಿಗಳಿಗೆ ಸ್ಥಳಾವಕಾಶವನ್ನು ಕಲ್ಪಿಸಬಹುದಾಗಿರುತ್ತದೆ. ಪ್ರಸ್ತಾಪಿತ ಸದರಿ ಕಟ್ಟಡದ ಪಕ್ಕದಲ್ಲಿ ಈಗಾಗಲೇ ಬಿ.ಬಿ.ಎಂ.ಪಿ.ಯ ಎಂ.ಎಲ್.ಸಿ.ಪಿ. ಪಾರ್ಕಿಂಗ್ ಕಟ್ಟಡವಿದ್ದು, ಸದರಿ ಕಛೇರಿಗಳಿಗೆ ಹಾಗೂ ವಾಣಿಜ್ಯ ಸಂಕೀರ್ಣಕ್ಕೆ ವಾಹನ ನಿಲುಗಡೆ ವ್ಯವಸ್ಥೆಯನ್ನು ಕಲ್ಪಿಸಬಹುದಾಗಿರುತ್ತದೆ. ಮುಂದಿನ ದಿನಗಳಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಚುನಾವಣೆ ಬರುವುದರಿಂದ ಕೇಂದ್ರ ಕಛೇರಿಯಲ್ಲಿ ವಾಹನ ನಿಲುಗಡೆಗೆ ಮಾಡಲು ಸ್ಥಳವಕಾಶ ಕಲ್ಪಿಸಲು ಕಷ್ಟಕರವಾಗಿದ್ದು, ಕೇಂದ್ರ ಕಛೇರಿಯಲ್ಲಿ ಇರುವ ವಿವಿಧ ಕಛೇರಿಗಳಿಗೆ ಈ ಕಟ್ಟಡದಲ್ಲಿ ಕಛೇರಿ ಸೌಲಭ್ಯವನ್ನು ಒದಗಿಸಿದ್ದಲ್ಲಿ, ವಾಹನ ನಿಲುಗಡೆ ಸೌಲಭ್ಯ ಸಮಸ್ಯೆಯನ್ನು ಪರಿಹರಿಸಬಹುದಾಗಿದೆ. ಆದ್ದರಿಂದ ಸದರಿ ಸಮಸ್ಯೆಗಳನ್ನು ಪರಿಗಣಿಸಿ, ಯೋಜನಾ ವರದಿಯನ್ನು ರೂ.49.18 ಕೋಟಿಗಳಿಗೆ 2021–22 ನೇ ಸಾಲಿನ ದರಗಳ ಪಟ್ಟಿಯಂತೆ ತಯಾರಿಸಲಾಗಿದೆ.

ಪ್ರಸ್ತಾಪಿತ ಕಾಮಗಾರಿಯು ಸಾರ್ವಜನಿಕರ ಹಿತದೃಷ್ಟಿಯಿಂದ ಹಾಗೂ ಪಾಲಿಕೆಯ ಆರ್ಥಿಕ ಹಿತದೃಷ್ಟಿಯಿಂದ ಸದರಿ ಕಾಮಗಾರಿಯನ್ನು ಕೈಗೊಳ್ಳುವುದು ತುಂಬಾ ಅತ್ಯಾವಶ್ಯಕವಾಗಿದೆ ಎಂದು ಕಾರ್ಯಪಾಲಕ ಅಭಿಯಂತರರು (ಚಿಕ್ಕಪೇಟೆ) ರವರು ದೃಢೀಕರಿಸಿರುತ್ತಾರೆ.

ಪ್ರಸ್ತಾಪಿತ ವಾಣಿಜ್ಯ ಕಟ್ಟಡಕ್ಕೆ ಸ್ಥಳೀಯ ಮಾರುಕಟ್ಟೆ ಬಾಡಿಗೆ ದರಗಳಂತೆ ಪ್ರತಿ ಮಾಹೆ ರೂ. 80,86,733/- ಗಳು ಆದಾಯ ಬರುವುದಾಗಿ ಅಂದಾಜಿಸಲಾಗಿದ್ದು, ಕಟ್ಟಡ ನಿರ್ಮಾಣಕ್ಕಾಗಿ ರೂ.49.50 ಕೋಟಿಗಳನ್ನು ಬ್ಯಾಂಕ್ ನಿಂದ ಸಾಲ ಪಡೆದು ಮರುಪಾವತಿ ಅವಧಿಯನ್ನು 15 ವರ್ಷಗಳ ವರಗೆ ಪರಿಗಣಿಸಲಾಗಿದ್ದು, ಅದರಂತೆ ಪ್ರತಿ ಮಾಹೆಯು ರೂ.47,30,479/- ಗಳನ್ನು ಸಾಲದ ಮೊತ್ತವಾಗಿ ಮರು ಪಾವತಿಸಿದ ನಂತರ ಪ್ರತಿ ಮಾಹೆ ರೂ.31,19,854/- ಗಳು ಪಾಲಿಕೆಗೆ ಉಳಿತಾಯವಾಗುವುದಾಗಿ ಲೆಕ್ಕಚಾರ ಮಾಡಲಾಗಿದೆ.

ಮೇಲ್ಕಂಡ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಪ್ರಸ್ತಾಪಿತ ಕಾಮಗಾರಿಯು ಸಾರ್ವಜನಿಕರ ಹಿತದೃಷ್ಟಿಯಿಂದ ಹಾಗೂ ಪಾಲಿಕೆಯ ಆರ್ಥಿಕ ಹಿತದೃಷ್ಟಿಯಿಂದ ಅನುಷ್ಠಾನಗೊಳಿಸುವ ಸಂಬಂಧ ಸದರಿ ವಾಣಿಜ್ಯ ಕಟ್ಟಡ ನಿರ್ಮಾಣಕ್ಕಾಗಿ ತಗಲುವ ವೆಚ್ಚವನ್ನು ಬ್ಯಾಂಕ್ ಮುಖಾಂತರ ಸಾಲ ಪಡೆದು ನಿರ್ಮಾಣ ಮಾಡಲು ಹಾಗೂ ಸದರಿ ಸ್ಥಳದಲ್ಲಿ ವಾಣಿಜ್ಯ ಹಾಗೂ ಕಛೇರಿ ಕಟ್ಟಡಗಳನ್ನು ನಿರ್ಮಾಣ ಮಾಡಲು ಅನುಮೋದನೆ ಕೋರುತ್ತಾ, ವಾರ್ಡ್ ಮಟ್ಟದ ಲೋಕೋಪಯೋಗಿ ಕಾಮಗಾರಿ, ನಗರ ಯೋಜನೆ ಹಾಗೂ ಮೂಲ ಸೌಕರ್ಯ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ತೀರ್ಮಾನಕ್ಕಾಗಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ವಲಯ ಆಯುಕ್ತರು(ದಕ್ಷಿಣ) ರವರ ದಿನಾಂಕ:21-03-2023ರ ಟಿಪ್ಪಣಿ.

**ತೀರ್ಮಾನ: ಸರ್ಕಾರದ ಅನುಮೋದನೆ ಪಡೆಯುವ ಷರತ್ತಿಗೊಳಪಟ್ಟು, ವಲಯ ಆಯುಕ್ತರು (ದಕ್ಷಿಣ) ರವರ ದಿನಾಂಕ:21-03-2023ರ ಟಿಪ್ಪಣಿಯನ್ನು ಒಪ್ಪಿದೆ.**

(ರಾಕೇಶ್ ಸಿಂಗ್)
ಆಡಳಿತಗಾರರು

## ತೆರಿಗೆ ವಿಧಿಸುವಿಕೆ ಮತ್ತು ಹಣಕಾಸು ಮತ್ತು ಅಪೀಲು ಸ್ಥಾಯಿ ಸಮಿತಿ, ವಾರ್ಡ್ ಮಟ್ಟದ ಲೋಕೋಪಯೋಗಿ ಕಾಮಗಾರಿ, ನಗರ ಯೋಜನೆ ಹಾಗೂ ಮೂಲ ಸೌಕರ್ಯ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ: ೧೯ – ೦೫ –2023ರ ನಡವಳಿಗಳು

**ವಿಷಯದ ಸಂಖ್ಯೆ: 02 /2023-24**

**ಪ್ರಸ್ತಾವನೆ :**

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ವಾರ್ಡ್ ಮಟ್ಟದ ಲೋಕೋಪಯೋಗಿ ಕಾಮಗಾರಿ, ನಗರ ಯೋಜನೆ ಹಾಗೂ ಮೂಲ ಸೌಕರ್ಯ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರವನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:07.03.2023 ರ ನಡವಳಿಗಳ ವಿಷಯದ ಸಂಖ್ಯೆ:467/2022-23 ರಂತೆ ಮಾನ್ಯ ಆಡಳಿತಗಾರರು, ಬೃ.ಬೆಂ.ಮ.ಪಾಲಿಕೆ ರವರಿಂದ 2022-23ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ P3075 Special comprehensive development works in Bangalore city (Bangalore city in charge Minister Discretionary Grants) ಅನುದಾನಡಿಯಲ್ಲಿ ಈ ಕೆಳಕಂಡ ಒಟ್ಟು ರೂ.2000.00 ಲಕ್ಷಗಳ 20 ಕಾಮಗಾರಿಗಳ ಕ್ರಿಯಾ ಯೋಜನೆಗೆ ಅನುಮೋದನೆ ಪಡೆಯಲಾಗಿರುತ್ತದೆ. (ನಡವಳಿಗಳ ಪ್ರತಿಯನ್ನು ಲಗತ್ತಿಸಿದೆ)

| Sl No | Ward No & Name | Name of the work | Estimate Cost (in Lakhs) |
|---|---|---|---|
| 1 | 201 Umamaheshwara Ward (Old Ward No 166) | Improvements to roads and drains at 7th Block Jayanagar, Karisadra Village and surrounding area in Ward No-201 Umamaheshwara Ward (Old Ward No-166). | 100.00 |
| 2 | 201 Umamaheshwara Ward (Old Ward No 166) | Improvements to roads and drains at BSK 2nd stage and surrounding area and Construction of community buildings in Ward No-201 Umamaheshwara Ward (Old Ward No-166). | 100.00 |
| 3 | 202 Ganesha Mandira (Old Ward No 165) | Improvements to roads and drains at 7th block surrounding area, Banagirinagar surrounding area BSK 3rd stage in Ward No-202 Ganesh Mandira (Old Ward No-165). | 100.00 |
| 4 | 202 Ganesha Mandira (Old Ward No 165) | Improvements to roads and drains at Devagiri Temple surrounding area and Ward office surrounding area BSK 2nd stage in Ward No-202 Ganesh Mandira (Old Ward No-165). | 100.00 |
| 5 | 203 Banashankari Temple (Old Ward No 180) | Improvements to roads and drains at Yarabnagar and surrounding area in Ward No-203 Banashankari Temple Ward (Old Ward No-180). | 100.00 |
| 6 | 203 Banashankari Temple (Old Ward No 180) | Improvements to roads and drains at Sarabandepalya and surrounding area in Ward No-203 Banashankari Temple Ward (Old Ward No-180). | 100.00 |
| 7 | 200 Yediyur (Old Ward No 167) | Improvements to drains at roads Between K.R Road and S. Kariyappa Road in Ward No-200 Yediyur (Old Ward No-167). | 100.00 |
| 8 | 200Yediyur (Old Ward No 167) | Improvements to roads, drains and community properties at Sakamma Garden, Vijayarangam Layout and surrounding area in Ward No-200 Yediyur (Old Ward No-167). | 100.00 |
| 9 | 204 Kumarswamy Layout (Old Ward No-181) | Improvements to roads and Drains in Kanaka Layout and Surroundings area in Ward No-204 Kumarswamy Layout (Old Ward No-181). | 100.00 |
| 10 | 204 Kumarswamy Layout (Old Ward No-181) | Improvements to roads and Drains in JHBCS, Illiyasnagar and Minajnagar and Surroundings area in Ward No-204 Kumarswamy Layout (Old Ward No-181). | 100.00 |

| | | | |
|---|---|---|---|
| 11 | 205<br>Vikramanagara<br>(Old Ward No-181 & 182) | Improvements to roads and Drains in ISRO Layout and Surroundings area in Ward No-205 Vikram Nagar (Old Ward No-181 and 182). | 100.00 |
| 12 | 205<br>Vikramanagara<br>(Old Ward No-181 & 182) | Improvements to roads and Drains in Samruddi Layout, Gowdanapalya, Kumaraswamy Layout and Surroundings area in Ward No-205 Vikram Nagar (Old Ward No-181 and 182). | 100.00 |
| 13 | 206<br>Padmanabha Nagar<br>(Old Ward No- 182) | Improvements to roads and Drains Padmanabhanagar and Surroundings area in Ward No-206 Padmanabha Nagar (Old Ward No-182). | 100.00 |
| 14 | 206<br>Padmanabha Nagar<br>(Old Ward No- 182) | Improvements to roads and Drains Gururaja Layout and Surroundings area in Ward No-206 Padmanabha Nagar (Old Ward No-182). | 100.00 |
| 15 | 207<br>Kamakya layout<br>(Old Ward No-183) | Improvements to roads and Drains in Hanumagirinagar and Surroundings area in Ward No-207 Kamakya Layout (Old Ward No-183). | 100.00 |
| 16 | 207<br>Kamakya layout<br>(Old Ward No-183) | Improvements to roads and Drains in Sri Gangamma Temple and Surroundings area in Ward No-207 Kamakya Layout (Old Ward No-183). | 100.00 |
| 17 | 208<br>Deen Dayalu Ward<br>(Old Ward No-161 & 183) | Improvements to roads and Drains in Ittamadu, Manjunatha Nagar and Surroundings area in Ward No-208 Deen Dayalu Ward (Old Ward No-161 and 183). | 100.00 |
| 18 | 208<br>Deen Dayalu Ward<br>(Old Ward No-161 & 183) | Improvements to roads and Drains in and T.G Layout, Marutinagar and Surroundings area in Ward No-208 Deen Dayalu Ward (Old Ward No-161 and 183). | 100.00 |
| 19 | 209<br>Hosakerehalli<br>(Old Ward No-161) | Improvements to roads and Drains in Dwarakanagar and Venkatappa Layout Surroundings area in Ward No-209 Hosakerehalli (Old Ward No-161). | 100.00 |
| 20 | 209<br>Hosakerehalli<br>(Old Ward No-161) | Improvements to roads and Drains in Eshwarinagar, Hrushikeshnagar and Surroundings area in Ward No-209 Hosakerehalli (Old Ward No-161). | 100.00 |
| | | **Total** | **2000.00** |

ಮುಂದುವರೆದಂತೆ, ಅನುಮೋದನೆಗೊಂಡಿರುವ ಕ್ರಿಯಾ ಯೋಜನೆಯ 20 ಕಾಮಗಾರಿಗಳನ್ನು ಈ ಕೆಳಕಂಡ ಪಟ್ಟಿಯಲ್ಲಿ ಎಡ ಬದಿಯಲ್ಲಿ ನಮೂದಿಸಿ ಮಾನ್ಯ ಶ್ರೀ. ಆರ್. ಅಶೋಕ, ಕಂದಾಯ ಸಚಿವರು, ಕರ್ನಾಟಕ ಸರ್ಕಾರ ರವರು ಪತ್ರದ ಸಂಖ್ಯೆ:ಕಂಇಸ/1509/ಪಗ್ರ/202, ದಿನಾಂಕ:24.03.2023 ರಲ್ಲಿ ಸದರಿ ಅನುದಾನದಲ್ಲಿಯೇ ಒಟ್ಟು ರೂ.1000.00 ಲಕ್ಷಗಳ 04 ಕಾಮಗಾರಿಗಳನ್ನು ಕೈಗೊಳ್ಳಲು ಮಾನ್ಯ ಮುಖ್ಯ ಆಯುಕ್ತರು, ಬೃ.ಬೆಂ.ಮ.ಪಾಲಿಕೆ ರವರಿಗೆ ಪತ್ರದ ಮೂಲಕ ಕೋರಿರುವ ಮೇರೆಗೆ, ಸದರಿ 04 ಕಾಮಗಾರಿಗಳನ್ನು ಒಳಗೊಂಡಂತೆ ಈಗಾಗಲೇ ಅನುಮೋದನೆಯಾಗಿರುವ 10 ಕಾಮಗಾರಿಗಳನ್ನು ಯಥಾಸ್ಥಿತಿಯಂತೆ ಉಳಿಸಿಕೊಂಡು (ಈ ಪೈಕಿ ಈ ಕೆಳಗಿನ ಪಟ್ಟಿಯಲ್ಲಿನ ಎಡ ಬದಿಯ ಕ್ರಮ 18 ಮತ್ತು 19 ಗಳ ಒಟ್ಟು 02 ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ) ಇನ್ನುಳಿದ 10 ಕಾಮಗಾರಿಗಳನ್ನು ಕೈಬಿಟ್ಟು ಮಾನ್ಯ ಶ್ರೀ. ಆರ್. ಅಶೋಕ, ಕಂದಾಯ ಸಚಿವರು, ಕರ್ನಾಟಕ ಸರ್ಕಾರ ರವರು ಪತ್ರದ ಸಂಖ್ಯೆ: ಕಂಇಸ/1509/ಪಗ್ರ/202, ದಿನಾಂಕ: 4.03.2023ರಲ್ಲಿ ಕೋರಿರುವಂತೆ 04 ಕಾಮಗಾರಿಗಳನ್ನು ಕೈಗೊಳ್ಳಲು ಪ್ರಸ್ತಾಪಿಸಲಾಗಿರುತ್ತದೆ.

| ಈಗಾಗಲೇ ಕ್ರಿಯಾ ಯೋಜನೆ ಅನುಮೋದನೆಯಾಗಿರುವ ಕಾಮಗಾರಿಗಳು | | | ಬದಲಿ ಕ್ರಿಯಾ ಯೋಜನೆ ಅನುಮೋದನೆಯಾಗಬೇಕಾಗಿರುವ ಕಾಮಗಾರಿಗಳು | | |
|---|---|---|---|---|---|
| Sl No | Name of the work | Estimate Cost (in Lakhs) | Sl No | Name of the work | Estimate Cost (in Lakhs) |
| 1 | Improvements to roads and drains at 7th Block Jayanagar, Karisadra Village and surrounding area in Ward No-201 Umamaheshwara Ward (Old Ward No-166). | 100.00 | 1 | Providing and Supplying additional nesseary medical equipments fire fighting systems and other nesseary equipments to Sushrutha Children's Hospital and Primary health center at Sakamma garden in Ward No-200 Yediyur (Old Ward No-167). | 100.00 |

| | | | | | |
|---|---|---|---|---|---|
| 2 | Improvements to roads and drains at BSK 2nd stage and surrounding area and Construction of community buildings in Ward No-201 Umamaheshwara Ward (Old Ward No-166). | 100.00 | 2 | Comprehensive Development of Roads and drains and community properties in Ward No-200 Yediyur (Old Ward No-167). | 300.00 |
| 3 | Improvements to roads and drains at 7th block surrounding area, Banagirinagar surrounding area BSK 3rd stage in Ward No-202 Ganesh Mandira (Old Ward No-165). | 100.00 | | | |
| 4 | Improvements to roads and drains at Devagiri Temple surrounding area and Ward office surrounding area BSK 2nd stage in Ward No-202 Ganesh Mandira (Old Ward No-165). | 100.00 | | | |
| 5 | Improvements to roads and drains at Yarabnagar and surrounding area in Ward No-203 Banashankari Temple Ward (Old Ward No-180). | 100.00 | 3 | Additional developmental works to Auditorium and Samudayabhavana, S Kariyappa road in Ward No-200 Yediyur (Old Ward No-167). | 400.00 |
| 6 | Improvements to roads and drains at Sarabandepalya and surrounding area in Ward No-203 Banashankari Temple Ward (Old Ward No-180). | 100.00 | | | |
| 7 | Improvements to drains at roads Between K.R Road and S. Kariyappa Road in Ward No-200 Yediyur (Old Ward No-167). | 100.00 | | | |
| 8 | Improvements to roads, drains and community properties at Sakamma Garden, Vijayarangam Layout and surrounding area in Ward No-200 Yediyur (Old Ward No-167). | 100.00 | | | |
| 9 | Improvements to roads and Drains in Kanaka Layout and Surroundings area in Ward No-204 Kumarswamy Layout (Old Ward No-181). | 100.00 | 4 | Improvements to roads and Drains in Kanaka Layout and Surroundings area in Ward No-204 Kumarswamy Layout (Old Ward No-181). | 100.00 |
| 10 | Improvements to roads and Drains in JHBCS, Illiyasnagar and Minajnagar and Surroundings area in Ward No-204 Kumarswamy Layout (Old Ward No-181). | 100.00 | 5 | Providing Additional Improvemental works to BBMP Sushrutha Children's Hospital and Primary health center at Sakamma garden in Ward No-200 Yediyur (Old Ward No-167). | 200.00 |
| 11 | Improvements to roads and Drains in ISRO Layou and Surroundings area in Ward No-205 Vikram Nagar (Old Ward No-181 and 182). | 100.00 | | | |
| 12 | Improvements to roads and Drains in Samruddi Layout, Gowdanapalya, Kumaraswamy Layout and Surroundings area in Ward No-205 Vikram Nagar (Old Ward No-181 and 182). | 100.00 | 6 | Improvements to roads and Drains in Samruddi Layout, Gowdanapalya, Kumaraswamy Layout and Surroundings area in Ward No-205 Vikram Nagar (Old Ward No-181 and 182). | 100.00 |
| 13 | Improvements to roads and Drains Padmanabhanagar and Surroundings area in Ward No-206 Padmanabha Nagar (Old Ward No-182). | 100.00 | 7 | Improvements to roads and Drains Padmanabhanagar and Surroundings area in Ward No-206 Padmanabha Nagar (Old Ward No-182). | 100.00 |
| 14 | Improvements to roads and Drains Gururaja Layout and Surroundings area in Ward No-206 Padmanabha Nagar (Old Ward No-182). | 100.00 | 8 | Improvements to roads and Drains Gururaja Layout and Surroundings area in Ward No-206 Padmanabha Nagar (Old Ward No-182). | 100.00 |

| | | | | | |
|---|---|---|---|---|---|
| 15 | Improvements to roads and Drains in Hanumagirinagar and Surroundings area in Ward No-207 Kamakya Layout (Old Ward No-183). | 100.00 | 9 | Improvements to roads and Drains in Hanumagirinagar and Surroundings area in Ward No-207 Kamakya Layout (Old Ward No-183). | 100.00 |
| 16 | Improvements to roads and Drains in Sri Gangamma Temple and Surroundings area in Ward No-207 Kamakya Layout (Old Ward No-183). | 100.00 | 10 | Improvements to roads and Drains in Sri Gangamma Temple and Surroundings area in Ward No-207 Kamakya Layout (Old Ward No-183). | 100.00 |
| 17 | Improvements to roads and Drains in Ittamadu, Manjunatha Nagar and Surroundings area in Ward No-208 Deen Dayalu Ward (Old Ward No-161 and 183). | 100.00 | 11 | Improvements to roads and Drains in Ittamadu, Manjunatha Nagar and Surroundings area in Ward No-208 Deen Dayalu Ward (Old Ward No-161 and 183). | 100.00 |
| 18 | Improvements to roads and Drains in and T.G Layout, Marutinagar and Surroundings area in Ward No-208 Deen Dayalu Ward (Old Ward No-161 and 183). | 100.00 | 12 | Improvements to roads and Drains in and T.G Layout, Marutinagar and Surroundings area in Ward No-208 Deen Dayalu Ward (Old Ward No-161 and 183). | 100.00 (Work in Progress) |
| 19 | Improvements to roads and Drains in Dwarakanagar and Venkatappa Layout Surroundings area in Ward No-209 Hosakerehalli (Old Ward No-161). | 100.00 | 13 | Improvements to roads and Drains in Dwarakanagar and Venkatappa Layout Surroundings area in Ward No-209 Hosakerehalli (Old Ward No-161). | 100.00 (Work in Progress) |
| 20 | Improvements to roads and Drains in Eshwarinagar, Hrushikeshnagar and Surroundings area in Ward No-209 Hosakerehalli (Old Ward No-161). | 100.00 | 14 | Improvements to roads and Drains in Eshwarinagar, Hrushikeshnagar and Surroundings area in Ward No-209 Hosakerehalli (Old Ward No-161). | 100.00 |
| | Total | 2000.00 | | Total | 2000.00 |

ಆದ್ದರಿಂದ ಈ ಮೇಲ್ಕಂಡ ಪಟ್ಟಿಯಲ್ಲಿ ಬಲ ಬದಿಯಲ್ಲಿ ನಮೂದಿಸಿರುವ ಅಂದಾಜು ಮೊತ್ತ ರೂ.2000.00 ಲಕ್ಷಗಳ ಒಟ್ಟು 14 ಕಾಮಗಾರಿಗಳನ್ನು 2022-23ನೇ ಸಾಲಿನ P3075 Special comprehensive development works in Bangalore city (Bangalore city in charge Minister Discretionary Grants) ಲೆಕ್ಕಶೀರ್ಷಿಕೆಯ ಅನುದಾನದಡಿಯಲ್ಲಿ ಕೈಗೊಳ್ಳಲು (ಈ ಮೇಲಿನ ಪಟ್ಟಿಯಲ್ಲಿನ ಬಲ ಬದಿಯ ಕ್ರಮ ಸಂಖ್ಯೆ: 12 ಮತ್ತು 13 ಗಳ ಒಟ್ಟು 02 ಪ್ರಗತಿಯಲ್ಲಿರುವ ಕಾಮಗಾರಿಗಳನ್ನು ಒಳಗೊಂಡಂತೆ, ಈಗಾಗಲೇ ಅನುಮೋದನೆಯಾಗಿರುವ 10 ಕಾಮಗಾರಿಗಳನ್ನು ಯಥಾಸ್ಥಿತಿಯಂತೆ ಉಳಿಸಿಕೊಂಡು) ಕಾಮಗಾರಿಗಳ ಕ್ರಿಯಾ ಯೋಜನೆಗೆ ಅನುಮೋದನೆ ಕೋರುತ್ತಾ, ತೆರಿಗೆ ನಿರ್ಧರಿಸುವಿಕೆ ಮತ್ತು ಹಣಕಾಸು ಮತ್ತು ಅಪೀಲು ಸ್ಥಾಯಿ ಸಮಿತಿ, ವಾರ್ಡ್ ಮಟ್ಟದ ಲೋಕೋಪಯೋಗಿ ಕಾಮಗಾರಿ, ನಗರ ಯೋಜನೆ ಹಾಗೂ ಮೂಲ ಸೌಕರ್ಯ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ತೀರ್ಮಾನಕ್ಕಾಗಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ವಲಯ ಆಯುಕ್ತರು (ದಕ್ಷಿಣ) ರವರ ದಿನಾಂಕ:27-03-2023ರ ಟಿಪ್ಪಣಿ.

**ತೀರ್ಮಾನ: ವಿಷಯ ಸಂಖ್ಯೆ:467/2022-23ರ ನಿರ್ಣಯವನ್ನು ಭಾಗಶ: ಮಾರ್ಪಡಿಸುತ್ತಾ, ವಲಯ ಆಯುಕ್ತರು (ದಕ್ಷಿಣ)ರವರ ದಿನಾಂಕ:27-03-2023ರ ಟಿಪ್ಪಣಿಯನ್ನು ಒಪ್ಪಿದೆ.**

(ರಾಕೇಶ್ ಸಿಂಗ್)
ಆಡಳಿತಗಾರರು

# ತೆರಿಗೆ ವಿಧಿಸುವಿಕೆ ಮತ್ತು ಹಣಕಾಸು ಮತ್ತು ಅಪೀಲು ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರವನ್ನು ಚಲಾಯಿಸಿ ಆಡಳಿತಗಾರರ ದಿನಾಂಕ: ೨೦ -೦೫ - 2023ರ ನಡವಳಿಗಳು:

**ವಿಷಯದ ಸಂಖ್ಯೆ: 05/2023-24**

**ಪ್ರಸ್ತಾವನೆ:**

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಆಡಳಿತ ವ್ಯಾಪ್ತಿಯಲ್ಲಿ 2023-24 ನೇ ಆರ್ಥಿಕ ಸಾಲಿಗೆ ಸಂಬಂಧಪಟ್ಟಂತೆ, ವಾರ್ಷಿಕ ಆಸ್ತಿತೆರಿಗೆಯನ್ನು ಪೂರ್ಣ ಪ್ರಮಾಣದಲ್ಲಿ ದಿನಾಂಕ: 30-04-2023 ರ ಒಳಗೆ ಪಾವತಿಸಿದಲ್ಲಿ ಆಸ್ತಿತೆರಿಗೆ ಮೇಲೆ ಶೇಕಡ 5 ರಷ್ಟು ರಿಯಾಯಿತಿಯನ್ನು ನೀಡಲು ಬಿಬಿಎಂಪಿ ಕಾಯ್ದೆ 2020 ರ ಪ್ರಕರಣ 144 (8) ರ ಅನ್ವಯ ಅವಕಾಶ ಕಲ್ಪಿಸಲಾಗಿದೆ. ಮುಂದುವರೆದು, ರಿಯಾಯಿತಿ ಅವಧಿಯನ್ನು ವಿಸ್ತರಿಸಬೇಕಾಗಿದ್ದಲ್ಲಿ ಪಾಲಿಕೆ ಸಭೆ ಹಾಗೂ ಸರ್ಕಾರದ ಅನುಮೋದನೆ ಪಡೆದು ವಿಸ್ತರಿಸಲು ಕಾಯ್ದೆಯಲ್ಲಿ ಅವಕಾಶ ಕಲ್ಪಿಸಲಾಗಿದೆ.

ಕರ್ನಾಟಕ ವಿಧಾನಸಭೆಯ ಸಾರ್ವತ್ರಿಕ ಚುನಾವಣೆ 2023 ರ ನೀತಿ ಸಂಹಿತಿಯು ದಿನಾಂಕ: 29-03-2023 ರಂದು ಘೋಷಣೆಯಾಗಿದ್ದು, ದಿನಾಂಕ:15-05-2023ಕ್ಕೆ ಪೂರ್ಣಗೊಂಡಿರುತ್ತದೆ. 2023-24 ನೇ ಸಾಲಿನ ಆಸ್ತಿತೆರಿಗೆ ಸಂಗ್ರಹಣೆಯು ಏಪ್ರಿಲ್ 1 2023 ರಿಂದ ಪ್ರಾರಂಭಗೊಂಡಿರುತ್ತದೆ. ನಗರ ಪಾಲಿಕೆ ಕಂದಾಯ ಇಲಾಖೆಯ ಎಲ್ಲಾ ಅಧಿಕಾರಿಗಳು / ನೌಕರರುಗಳು ಸಂಪೂರ್ಣವಾಗಿ ಚುನಾವಣಾ ಕೆಲಸ ಕಾರ್ಯಗಳಲ್ಲಿ ತೊಡಗಿದ್ದರಿಂದ ಆಸ್ತಿತೆರಿಗೆ ಪಾವತಿಗೆ ಸಂಬಂಧಿಸಿದಂತೆ, ತೆರಿಗೆದಾರರಿಗೆ ಚಲನ್ ಸೃಜನೆಯಲ್ಲಿ ಹಾಗೂ ಆನ್‌ಲೈನ್ ಮೂಲಕ ಆಸ್ತಿತೆರಿಗೆ ಪಾವತಿಸುವಲ್ಲಿ ಸಕಾಲದಲ್ಲಿ / ಕ್ಲುಪ್ತ ಅವಧಿಯಲ್ಲಿ ಮಾಹಿತಿ ಒದಗಿಸಲು / ಸೂಕ್ತ ಮಾರ್ಗದರ್ಶನ ನೀಡಲು ಸಾಧ್ಯವಾಗಿರುವುದಿಲ್ಲ.

ಏಪ್ರಿಲ್ ಮಾಹೆಯಲ್ಲಿ ದಿನಾಂಕ: 07-04-2023 ರಿಂದ 12-04-2023 ರವರೆಗೆ ಮತ್ತು 21-04-2023 ರಂದು ಆಸ್ತಿ ತೆರಿಗೆ ತಂತ್ರಾಂಶವನ್ನು ಹೋಸ್ಟ್ ಮಾಡಲಾಗಿರುವ ರಾಜ್ಯ ದತ್ತಾಂಶ ಕೇಂದ್ರ (State Data Centre) ರಲ್ಲಿನ ತಾಂತ್ರಿಕ ತೊಂದರೆಯಿಂದಾಗಿ ತೆರಿಗೆದಾರರು ಆಸ್ತಿ ತೆರಿಗೆ ಪಾವತಿಸಲು ಸಾಧ್ಯವಾಗಿರುವುದಿಲ್ಲ. ಮೇಲಿನ ಕಾರಣಗಳಿಂದಾಗಿ ಪ್ರಸ್ತುತ ಸಾಲಿನ ಆಸ್ತಿ ತೆರಿಗೆ ಸಂಗ್ರಹಣೆಯನ್ನು ಹಿಂದಿನ ಸಾಲಿಗೆ ಹೋಲಿಸಿದ್ದಲ್ಲಿ ಒಟ್ಟಾರೆ ಶೇ.46ರಷ್ಟು ಕುಂಠಿತವಾಗಿರುತ್ತದೆ.

ಅದಾಗಿ, 2023-24ನೇ ಸಾಲಿನ ರಿಯಾಯಿತಿ ಅವಧಿಯನ್ನು ವಿಸ್ತರಿಸಲು ಕೋರಿ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯಷನ್ ಹಾಗೂ ಇತರೆ ತೆರಿಗೆದಾರರು ಇ-ಮೇಲ್ ಮುಖಾಂತರ ಕೋರಿರುತ್ತಾರೆ.

ಕರ್ನಾಟಕ ಸಾರ್ವತ್ರಿಕ ವಿಧಾನಸಭಾ ಚುನಾವಣೆ -2023ರ ನೀತಿ ಸಂಹಿತೆಯು ಜಾರಿಯಲ್ಲಿದ್ದ ಹಿನ್ನಲೆಯಲ್ಲಿ 2023-24 ನೇ ಸಾಲಿನ ಸಂಪೂರ್ಣ ಆಸ್ತಿ ತೆರಿಗೆಯನ್ನು ಪಾವತಿಸುವ ತೆರಿಗೆದಾರರಿಗೆ ಶೇಕಡ 5 ರಷ್ಟು ರಿಯಾಯಿತಿ ನೀಡುವ ಅವಧಿಯನ್ನು ದಿನಾಂಕ: 31-5-2023 ರವರೆಗೆ ವಿಸ್ತರಿಸುವ ಸಂಬಂಧ ತೀರ್ಮಾನ ಕೈಗೊಳ್ಳಲು ವಿನಾಯಿತಿ ಕೋರಿ ಸರ್ಕಾರದ ಮಟ್ಟದಲ್ಲಿ ರಚಿಸಲಾಗಿದ್ದ ಸ್ಕ್ರೀನಿಂಗ್ ಕಮಿಟಿಯ ಅನುಮೋದನೆ ಪಡೆಯುವ ಸಲುವಾಗಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಸದರಿ ಪ್ರಸ್ತಾವನೆ ಕುರಿತಂತೆ ತಹಲ್‌ವರೆಗೂ ಯಾವುದೇ ಮಾಹಿತಿ ಸ್ವೀಕರಿಸಿರುವುದಿಲ್ಲ.

ಆದುದರಿಂದ ಮೇ 1, 2023 ರಿಂದ 2023-24 ನೇ ಸಾಲಿನ ಸಂಪೂರ್ಣ ಆಸ್ತಿ ತೆರಿಗೆಯನ್ನು ಪಾವತಿಸುವ ತೆರಿಗೆದಾರರಿಗೆ ಶೇಕಡ 5 ರಷ್ಟು ರಿಯಾಯಿತಿ ನೀಡದೆ ಆಸ್ತಿ ತೆರಿಗೆ ಪಾವತಿಸಿಕೊಳ್ಳಲಾಗುತ್ತಿದೆ. ಮುಂದುವರೆದಂತೆ, ಕರ್ನಾಟಕ ಸಾರ್ವತ್ರಿಕ ವಿಧಾನಸಭಾ ಚುನಾವಣೆ -2023ರ ನೀತಿ ಸಂಹಿತೆಯು ದಿನಾಂಕ:15-05-2023 ರಂದು ಮುಕ್ತಾಯಗೊಂಡಿರುತ್ತದೆ.

ಮೇಲಿನ ಹಿನ್ನಲೆಯಲ್ಲಿ ತೆರಿಗೆದಾರರ ಅನುಕೂಲಕ್ಕಾಗಿ ಹಾಗೂ ನಗರ ಪಾಲಿಕೆ ಆರ್ಥಿಕ ಹಿತದೃಷ್ಟಿಯಿಂದ 2023-24ನೇ ಸಾಲಿನ ಆಸ್ತಿ ತೆರಿಗೆಯನ್ನು ಪೂರ್ಣವಾಗಿ ಪಾವತಿಸುವ ತೆರಿಗೆದಾರರಿಗೆ ರಿಯಾಯಿತಿ ಅವಧಿಯನ್ನು ದಿನಾಂಕ:01-05-2023ರಿಂದ 30-06-2023 ರವರೆಗೆ ವಿಸ್ತರಿಸಬಹುದಾಗಿರುತ್ತದೆ. ಈಗಾಗಲೇ ಪ್ರಸ್ತುತ ಸಾಲಿಗೆ ರಿಯಾಯಿತಿ ಪಡೆಯದೇ ದಿನಾಂಕ:01-05-2023 ರಿಂದ ಆಸ್ತಿತೆರಿಗೆ ಪಾವತಿಸಿರುವ ತೆರಿಗೆದಾರರಿಗೆ ಹೆಚ್ಚುವರಿಯಾಗಿ ಪಾವತಿಸಿರುವ ಮೊತ್ತವನ್ನು (ಪಡೆಯಬೇಕಾಗಿದ್ದ ರಿಯಾಯಿತಿ ಮೊತ್ತವನ್ನು) ಮುಂಬರುವ ಸಾಲುಗಳಿಗೆ ಹೊಂದಾಣಿಕೆ ಮಾಡುವ ಬಗ್ಗೆ ತೀರ್ಮಾನ ಕೈಗೊಳ್ಳಲು ತೆರಿಗೆ ವಿಧಿಸುವಿಕೆ ಮತ್ತು ಹಣಕಾಸು ಮತ್ತು ಅಪೀಲು ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರವನ್ನು ಚಲಾಯಿಸಿ ತೀರ್ಮಾನಕ್ಕಾಗಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಮುಖ್ಯ ಆಯುಕ್ತರವರ ದಿನಾಂಕ:18-05-2023ರ ಟಿಪ್ಪಣಿ.

**ತೀರ್ಮಾನ: ಮುಖ್ಯ ಆಯುಕ್ತರು ರವರ ದಿನಾಂಕ:18-05-2023ರ ಟಿಪ್ಪಣಿಯನ್ನು ಒಪ್ಪಿದೆ.**

**(ರಾಕೇಶ್ ಸಿಂಗ್)**
**ಆಡಳಿತಗಾರರು**

# ತೆರಿಗೆ ವಿಧಿಸುವಿಕೆ ಮತ್ತು ಹಣಕಾಸು ಮತ್ತು ಅಫೀಲು ಸ್ಥಾಯಿ ಸಮಿತಿ, ಶಿಕ್ಷಣ ಮತ್ತು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ: ೨೯ -೦೬ -2023ರ ನಡವಳಿಗಳು

## ವಿಷಯದ ಸಂಖ್ಯೆ: 04/2023-24

### ಪ್ರಸ್ತಾವನೆ:

ಟಿಪ್ಪಣಿಯಲ್ಲಿ ವಿವರಿಸಿರುವಂತೆ, 2023-24ನೇ ಸಾಲಿಗೆ ಪಾಲಿಕೆಯ ಶಾಲಾ/ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಖಾಯಂ ಮತ್ತು ಹೊರಗುತ್ತಿಗೆ ಶಿಕ್ಷಕರು/ಉಪನ್ಯಾಸಕರುಗಳ ವಿವರ ಹಾಗೂ ವಿದ್ಯಾರ್ಥಿಗಳ ಸಂಖ್ಯಾಬಲದ ವಿವರ ಈ ಕೆಳಕಂಡಂತಿರುತ್ತದೆ.

| ಕ್ರ ಸಂ | ಶಾಲಾ/ಕಾಲೇಜುಗಳ ವಿವರ ಹಾಗೂ ಸಂಖ್ಯೆ | ಖಾಯಂ ಶಿಕ್ಷಕರು/ ಉಪನ್ಯಾಸಕರುಗಳ ಸಂಖ್ಯೆ | ಹೊರಗುತ್ತಿಗೆ ಶಿಕ್ಷಕರು/ ಉಪನ್ಯಾಸಕರುಗಳ ಸಂಖ್ಯೆ | 2022-23ನೇ ಸಾಲಿನ ವಿದ್ಯಾರ್ಥಿಗಳ ಸಂಖ್ಯಾಬಲ |
|---|---|---|---|---|
| 1. | ಶಿಶುವಿಹಾರ -93 | 45 | 103 | 5340 |
| 2. | ಪ್ರಾಥಮಿಕ ಶಾಲೆ -16 | 33 | 93 | 3906 |
| 3. | ಪ್ರೌಢಶಾಲೆ- 33 | 29 | 268 | 8305 |
| | ಗಣಕಯಂತ್ರ ಶಿಕ್ಷಕರು | 00 | 28 | |
| 4. | ಪದವಿ ಪೂರ್ವಕಾಲೇಜು-18 | 60 | 170 | 6682 |
| 5. | ಪದವಿ ಕಾಲೇಜು-04 | 04 | 58 | 1339 |
| 6. | ಸ್ನಾತಕೋತ್ತರ ಪದವಿ ಕಾಲೇಜು-02 | 00 | 8 | 101 |
| | **ಒಟ್ಟು** | **171** | **728** | **25,673** |

ಪಾಲಿಕೆಯ ಶಾಲಾ/ಕಾಲೇಜುಗಳಲ್ಲಿ ಖಾಯಂ ಶಿಕ್ಷಕರು/ಉಪನ್ಯಾಸಕರು ಕೊರತೆ ಇರುವುದರಿಂದ ಈ ಹಿಂದಿನ ಹಲವಾರು ವರ್ಷಗಳಿಂದ ಪಾಲಿಕೆಯ ಶಾಲಾ/ಕಾಲೇಜುಗಳಿಗೆ ಮೆ॥ಕ್ರಿಸ್ಟಿಲ್ ಇನ್‌ಫೋಸಿಸ್ಟಮ್ ಅಂಡ್ ಸರ್ವೀಸಸ್ ಸಂಸ್ಥೆರವರ ಮೂಲಕ ಹೊರಗುತ್ತಿಗೆ ಆಧಾರದ ಮೇಲೆ ಅವಶ್ಯಕವಿರುವ ಶಿಕ್ಷಕರು/ಉಪನ್ಯಾಸಕರನ್ನು ಪಡೆಯಲಾಗುತ್ತಿದೆ, ಸದರಿ ಸಂಸ್ಥೆರವರ ಕಾರ್ಯಾದೇಶ ಅವಧಿಯು ದಿನಾಂಕ:31-03-2023ರಂದು ಮುಕ್ತಾಯವಾಗಿದ್ದು, 2023-24ನೇ ಸಾಲಿಗೆ ಪಾಲಿಕೆಯ ಶಾಲಾ/ಕಾಲೇಜುಗಳಲ್ಲಿ ಹೊರಗುತ್ತಿಗೆ ಶಿಕ್ಷಕರು/ಉಪನ್ಯಾಸಕರುಗಳ ಸೇವೆಯನ್ನು ಪಡೆಯಲು 'ಇ-ಪ್ರೊಕ್ಯೂರ್‌ಮೆಂಟ್' ಮೂಲಕ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪಶ್ಚಿಮ ವಲಯ, ಪೂರ್ವ ವಲಯ, ದಕ್ಷಿಣ ವಲಯ ಮತ್ತು ರಾ.ರಾ.ನಗರ ವಲಯವಾರು ಟೆಂಡರ್ ಕರೆಯಲಾಗಿರುತ್ತದೆ. ಪೂರ್ವ ವಲಯದಲ್ಲಿ ಕರೆಯಲಾಗಿರುವ ಟೆಂಡರ್‌ನಲ್ಲಿ ಏಕೈಕ ಬಿಡ್ದಾರರ ಮಾತ್ರ ಭಾಗವಹಿಸಲಾಗಿದ್ದು, ಸದರಿ ಬಿಡ್‌ದಾರರು ತಾಂತ್ರಿಕವಾಗಿ ಅರ್ಹತೆಯನ್ನು ಹೊಂದದೆ ಇರುವ ಹಿನ್ನೆಲೆಯಲ್ಲಿ ಅನರ್ಹಗೊಳಿಸಲಾಗಿರುತ್ತದೆ. ಪಶ್ಚಿಮ, ದಕ್ಷಿಣ ವಲಯ ಮತ್ತು ರಾ.ರಾ.ನಗರ ವಲಯಗಳ ಟೆಂಡರ್‌ನಲ್ಲಿ ಯಾವುದೇ ಬಿಡ್‌ದಾರರು ಭಾಗವಹಿಸಿರುವುದಿಲ್ಲ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಶಾಲಾ/ಕಾಲೇಜುಗಳಲ್ಲಿ ಸುಮಾರು 25,673 ವಿದ್ಯಾರ್ಥಿಗಳು 2022-23ನೇ ಸಾಲಿನಲ್ಲಿ ವ್ಯಾಸಂಗವನ್ನು ಮಾಡುತ್ತಿರುತ್ತಾರೆ. ಪ್ರಸ್ತುತ 2023-24ನೇ ಸಾಲಿಗೆ ದಿನಾಂಕ-29-05-2023ರಿಂದ ಶಾಲೆ ಪ್ರಾರಂಭಿಸಲಾಗುತ್ತಿದೆ, ಅದರಂತೆ ವಾರ್ಷಿಕ ಶೈಕ್ಷಣಿಕ ಕ್ರಿಯಾ ಯೋಜನೆಯ ವೇಳಾಪಟ್ಟಿಗಳನ್ನು ನಿಗದಿಪಡಿಸಲಾಗಿದೆ. ಅದರಂತೆ ಪಾಲಿಕೆಯ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ 2023-24ನೇ ಶೈಕ್ಷಣಿಕ ಸಾಲಿನಲ್ಲಿ ಏಕರೂಪದ ಚಟುವಟಿಕೆಗಳನ್ನು ಜಾರಿಗೊಳಿಸಲು ಅನುವಾಗುವಂತೆ ಶೈಕ್ಷಣಿಕ ಅವಧಿಗಳು, ರಜಾ ದಿನಗಳು, ವಾರ್ಷಿಕ ಕಾರ್ಯಸೂಚಿಯನ್ನು ಈ ಪತ್ರದೊಂದಿಗೆ ಲಗತ್ತಿಸಿದೆ.

2015-16ನೇ ಸಾಲಿನಿಂದ ಪ್ರತಿ ಶೈಕ್ಷಣಿಕ ವರ್ಷದ ಪೂರ್ವದಲ್ಲಿ ಹೊರಗುತ್ತಿಗೆ ಶಿಕ್ಷಕರು ಹಾಗೂ ಉಪನ್ಯಾಸಕರುಗಳ ಸೇವೆಯನ್ನು ಪಡೆಯಲು ಟೆಂಡರ್ ಮೂಲಕ ಪಡೆಯಲಾಗುತ್ತಿದೆ. ಸದರಿ ಟೆಂಡರ್‌ಗಳಿಗೆ ಮೆ॥ ಕ್ರಿಸ್ಟಲ್ ಇನ್‌ಫೋಸಿಸ್ಟಮ್ ಅಂಡ್ ಸರ್ವೀಸಸ್ ಸಂಸ್ಥೆರವರನ್ನು ಹೊರತುಪಡಿಸಿ ಬೇರೆ ಯಾವುದೇ ಏಜೆನ್ಸಿಗಳು ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸದೇ ಇರುವುದು ಕಂಡು ಬಂದಿರುತ್ತದೆ. ಮಕ್ಕಳ ಹಿತದೃಷ್ಟಿಯಿಂದ ಶೈಕ್ಷಣಿಕವಾಗಿ ವಂಚಿತರಾಗದಂತೆ ಕ್ರಮವಹಿಸುವ ಹಿನ್ನೆಲೆಯಲ್ಲಿ ಮುಂದಿನ ಟೆಂಡರ್ ಪ್ರಕ್ರಿಯೆ ಪೂರ್ಣಗೊಳ್ಳುವವರೆವಿಗೂ ಹೊರಗುತ್ತಿಗೆ ಶಿಕ್ಷಕರು ಹಾಗೂ ಉಪನ್ಯಾಸಕರುಗಳ ಸೇವೆಯನ್ನು ಒದಗಿಸಲು ಮೆ॥ ಕ್ರಿಸ್ಟಲ್ ಇನ್‌ಫೋಸಿಸ್ಟಮ್ ಅಂಡ್ ಸರ್ವೀಸಸ್ ಸಂಸ್ಥೆರವರನ್ನೇ ಮುಂದುವರೆಸುವುದು ಅನಿವಾರ್ಯವಾಗಿದೆ.

ಪಾಲಿಕೆಯ ಶಾಲಾ/ಕಾಲೇಜುಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ಶಿಕ್ಷಕರು ಹಾಗೂ ಉಪನ್ಯಾಸಕರುಗಳ ಸೇವೆಯನ್ನು ಪಡೆಯಲು ಇ-ಟೆಂಡರ್ ಪ್ರಕ್ರಿಯೆಯನ್ನು ನಡೆಸಲಾಗುತ್ತಿದೆ. ಆದರೆ ಸ್ಪರ್ಧಾತ್ಮಕವಾಗಿ ಏಜೆನ್ಸಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸದೇ ಇರುವ ಕಾರಣ RFP ಯನ್ನು ಸರಳೀಕರಣಗೊಳಿಸಿ ಪ್ರಸ್ತುತ ಕರೆಯುತ್ತಿರುವ ಇ-ಟೆಂಡರ್‌ಗೆ ಕನಿಷ್ಟ ಒಂದು ತಿಂಗಳು ಕಾಲಾವಕಾಶ ನೀಡಿ ವ್ಯಾಪಕ ಪ್ರಚಾರ ಕೈಗೊಂಡು ಟೆಂಡರ್ ಕರಯಲು ಹಾಗೂ ಮೆ॥ ಕ್ರಿಸ್ಟಲ್ ಇನ್‌ಫೋಸಿಸ್ಟಮ್ ಅಂಡ್ ಸರ್ವೀಸಸ್ ಸಂಸ್ಥೆಯು ಒದಗಿಸುತ್ತಿರುವ ಶಿಕ್ಷಕರು/ಉಪನ್ಯಾಸಕರ ಸೇವೆಯನ್ನು ಹೊಸದಾಗಿ ಟೆಂಡರ್ ಪ್ರಕ್ರಿಯೆ ಮುಗಿಯುವ ವರೆಗೆ ಅಥವಾ 2 ತಿಂಗಳ ಅವಧಿವರೆಗೆ ಮುಂದುವರೆಸುವ ಬಗ್ಗೆ ಅನುಮೋದನೆ ಕೋರಿದೆ. ಪರಿಷ್ಕರಿಸಿದ RFP ಯನ್ನು ಲಗತ್ತಿಸಿದೆ.

**2023-24ನೇ ಶೈಕ್ಷಣಿಕ ಸಾಲಿನಲ್ಲಿ ಏಜೆನ್ಸಿ ರವರು ಹೊರಗುತ್ತಿಗೆ ಆಧಾರದ ಮೇಲೆ ಶಿಕ್ಷಕರು ಹಾಗೂ ಉಪನ್ಯಾಸಕರುಗಳ ಸೇವೆಯನ್ನು ಒದಗಿಸಲು ಅನುಸರಿಸಬೇಕಾದ ಮಾರ್ಗಸೂಚಿಗಳು :-**

**ಸ್ಕ್ರೀನಿಂಗ್ ಕಮಿಟಿಯ ರಚನೆ:-**

ವಿಶೇಷ ಆಯುಕ್ತರು (ಶಿಕ್ಷಣ) ರವರ ಅಧ್ಯಕ್ಷತೆಯಲ್ಲಿ ಸ್ಕ್ರೀನಿಂಗ್ ಕಮಿಟಿ ರಚಿಸಲು ಅನುಮೋದನೆ ಕೋರಿದೆ. ಉಪ ಆಯುಕ್ತರು (ಆಡಳಿತ), ಉಪ ಆಯುಕ್ತರು (ಶಿಕ್ಷಣ), ಆಯುಕ್ತರು, ಶಾಲಾ ಶಿಕ್ಷಣ ಮತ್ತು ಆಯುಕ್ತರು ಪದವಿ ಪೂರ್ವ ಶಿಕ್ಷಣ ಮಂಡಳಿಯಿಂದ ಹಿರಿಯ ಅಧಿಕಾರಿಗಳು ಸದಸ್ಯರಾಗಿರುತ್ತಾರೆ. ಸ್ಕ್ರೀನಿಂಗ್ ಕಮಿಟಿ ರಚನೆಗೆ ಅನುಮೋದನೆ ನೀಡಬಹುದು.

**ಸ್ಕ್ರೀನಿಂಗ್ ಕಮಿಟಿಯ ಪಾತ್ರ :-**

- 2023-24ನೇ ಸಾಲಿನ ಶೈಕ್ಷಣಿಕ ವರ್ಷ ಆರಂಭವಾಗುತ್ತಿರುವುದರಿಂದ ಹೊರಗುತ್ತಿಗೆಯಲ್ಲಿ ಶಿಕ್ಷಕರು ಮತ್ತು ಉಪನ್ಯಾಸಕರ ಆಯ್ಕೆ ಮಾಡುವಾಗ ವಿದ್ಯಾರ್ಹತೆ ಹಾಗೂ 1 ರಿಂದ 8ನೇ ತರಗತಿಯ ಶಿಕ್ಷಕರಿಗೆ TET ಪಾಸಾದವರನ್ನು ಮಾತ್ರ ಆಯ್ಕೆ ಮಾಡಿಕೊಳ್ಳಲಾಗುವುದು.
- ಅರ್ಹ ಉತ್ತಮ ಸಂಪನ್ಮೂಲ ಶಿಕ್ಷಕರ ಗುರುತಿಸುವಿಕೆ ಮತ್ತು ಆಯ್ಕೆ.

- ಶಿಕ್ಷಕರ ಅಂಕಪಟ್ಟಿಯನ್ನು ಗಮನಿಸಲಾಗುವುದು.
- ಅರ್ಹ ಶಿಕ್ಷಕರು ಹಾಗೂ ಉಪನ್ಯಾಸಕರುಗಳ ಮನೋಭಾವ ಹಾಗೂ ಅವರ ಬೋಧನಾ ಸಾಮರ್ಥ್ಯವನ್ನು ಗುರುತಿಸಲಾಗುವುದು.
- ಅರ್ಹ ಶಿಕ್ಷಕರ ಬೋದನಾನುಭವ.

**ಶಿಕ್ಷಕರು ಮತ್ತು ಉಪನ್ಯಾಸಕರುಗಳ ಆಯ್ಕೆಯ ವಿಧಾನ :-**

2023-24ನೇ ಶೈಕ್ಷಣಿಕ ಸಾಲಿಗೆ ಶಿಕ್ಷಕರು ಮತ್ತು ಉಪನ್ಯಾಸಕರುಗಳ ಆಯ್ಕೆಗಾಗಿ ನಿಗದಿತ ವಿದ್ಯಾರ್ಹತೆ ಮತ್ತು ಟಿ.ಇ.ಟಿ. ಪಾಸಾದ ಶಿಕ್ಷಕರು ಮತ್ತು ಉಪನ್ಯಾಸಕರ ಪಟ್ಟಿಯನ್ನು ದೃಢೀಕರಿಸಿದ ಅಂಕಪಟ್ಟಿಗಳನ್ನು ಏಜೆನ್ಸಿಯು ಮೊದಲಿಗೆ ನೀಡಬೇಕು. ಆ ನಂತರದಲ್ಲಿ ಸ್ಕ್ರೀನಿಂಗ್ ಕಮಿಟಿಯು ಪ್ರತಿಯೊಬ್ಬ ಶಿಕ್ಷಕರು ಹಾಗೂ ಉಪನ್ಯಾಸಕರುಗಳ ವಿದ್ಯಾರ್ಹತೆ ಪರಿಶೀಲನೆ ಮಾಡುವುದು. ಹಾಗೂ ಅವರ ಸೇವಾ ಮನೋಭಾವ ಮತ್ತು ಬೋಧನಾ ಕೌಶಲ್ಯಗಳ ವಿವರಗಳನ್ನು ಪಡೆಯಲಾಗುವುದು.

**ಶಿಕ್ಷಕರು / ಉಪನ್ಯಾಸಕರ ಆಯ್ಕೆಯ ದಿನಾಂಕ:-**

ದಿನಾಂಕ:15-05-2023 ರಿಂದ 23-05-2023 ರವರೆಗೆ ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ಕಛೇರಿ, ಶಾಂತಿಗೃಹ, ಬೆಂಗಳೂರು-01 ರಲ್ಲಿ ಸ್ಕ್ರೀನಿಂಗ್ ಕಮಿಟಿಯ ಮೂಲಕ ಶಿಕ್ಷಕರು ಹಾಗೂ ಉಪನ್ಯಾಸಕರುಗಳ ಸೇವೆಯನ್ನು ಗುರುತಿಸಲಾಗುವುದು.

**ಹಣಕಾಸಿನ ವಿವರಗಳು :-**

ಹೊರಗುತ್ತಿಗೆ ಶಿಕ್ಷಕರು ಹಾಗೂ ಉಪನ್ಯಾಸಕರುಗಳಿಗೆ ಪ್ರತಿ ತಿಂಗಳ ಗೌರವ ಸಂಭಾವನೆಗೆ ವೆಚ್ಚ ರೂ:1,96,99,877/- ರೂಗಳು ಖರ್ಚಾಗುತ್ತಿದ್ದು, ಈ ಬಾಬ್ತಿಗೆ ಒಟ್ಟು 2 ತಿಂಗಳಿಗೆ ಭರಿಸಬೇಕಾದ ಅಂದಾಜು ವೆಚ್ಚ ರೂ:3,93,99,754/- (ಮೂರು ಕೋಟಿ ತೊಂಭತ್ತು ಮೂರು ಲಕ್ಷದ ತೊಂಬತ್ತೊಂಭತ್ತು ಸಾವಿರದ ಏಳು ನೂರ ಐವತ್ನಾಲ್ಕು) ರೂಗಳಾಗುತ್ತದೆ. ಶಿಕ್ಷಕರು/ಉಪನ್ಯಾಸಕರ (ಸಂಖ್ಯೆಗನುಗುಣವಾಗಿ ಬದಲಾವಣೆಗೆ ಒಳಪಟ್ಟು) ಸಂಭಾವನೆ ವೆಚ್ಚ ಹೆಚ್ಚು ಅಥವಾ ಕಡಿಮೆಯಾಗುವ ಸಂಭವವಿರುತ್ತದೆ.

ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಅವಗಾಹನೆಗೆ ತರುತ್ತಾ, ಮೆ॥ ಕ್ರಿಸ್ಟಲ್ ಇನ್‌ಫೋಸಿಸ್ಟಮ್ ಅಂಡ್ ಸರ್ವೀಸಸ್ ಏಜೆನ್ಸಿಯನ್ನು ತಾತ್ಕಾಲಿಕವಾಗಿ 2 ತಿಂಗಳ ಅವಧಿಗೆ ಅಥವಾ ಟೆಂಡರ್ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೂ ಮುಂದುವರೆಸಲು ಹಾಗೂ ಈ ಮೇಲ್ಕಂಡ ಮಾರ್ಗಸೂಚಿಗಳನ್ವಯ ಶಿಕ್ಷಕರು/ಉಪನ್ಯಾಸಕರನ್ನು ಆಯ್ಕೆ ಮಾಡಿ ನಿಯೋಜಿಸಿಕೊಳ್ಳುವ ಬಗ್ಗೆ ಅನುಮೋದನೆ ನೀಡಲು ಕೋರುತ್ತಾ, ತೆರಿಗೆ ವಿಧಿಸುವಿಕೆ ಮತ್ತು ಹಣಕಾಸು ಮತ್ತು ಅಪೀಲು ಸ್ಥಾಯಿ ಸಮಿತಿ, ಶಿಕ್ಷಣ ಮತ್ತು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ತೀರ್ಮಾನಕ್ಕಾಗಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಶಿಕ್ಷಣ) ರವರ ದಿನಾಂಕ:16-05-2022ರ ಟಿಪ್ಪಣಿ.

**ತೀರ್ಮಾನ: ವಿಶೇಷ ಆಯುಕ್ತರು (ಶಿಕ್ಷಣ)ರವರ ದಿನಾಂಕ: 16-05-2023ರ ಟಿಪ್ಪಣಿಯನ್ನು ಒಪ್ಪಿದೆ.**

(ರಾಕೇಶ್ ಸಿಂಗ್)
ಆಡಳಿತಗಾರರು

# ತೆರಿಗೆ ವಿಧಿಸುವಿಕೆ ಮತ್ತು ಹಣಕಾಸು ಮತ್ತು ಅಪೀಲು ಸ್ಥಾಯಿ ಸಮಿತಿ, ಸಾರ್ವಜನಿಕ ಆರೋಗ್ಯ ಘನತ್ಯಾಜ್ಯ ಮತ್ತು ವಿಪತ್ತು ನಿರ್ವಹಣೆ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ: ೨೯ – ೦೬ –2023ರ ನಡವಳಿಗಳು

**ವಿಷಯದ ಸಂಖ್ಯೆ: 06 /2023-24**

**ಪ್ರಸ್ತಾವನೆ :**

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರ ವಾರ್ಡ್ ಸಂಖ್ಯೆ: 142ರಲ್ಲಿ ಕಾರ್ಯನಿರ್ವಹಿಸುತ್ತಿರುವ ಪಾಲಿಕೆಯ ಆರೋಗ್ಯ ವೈದ್ಯಕೀಯ (ಕ್ಲಿನಿಕಲ್) ಇಲಾಖೆ ವ್ಯಾಪ್ತಿಯ 24 ಹಾಸಿಗೆಗಳ ಗವೀಪುರಂ ಗುಟ್ಟಹಳ್ಳಿ ಹೆರಿಗೆ ಆಸ್ಪತ್ರೆಯು 1963 ಇಸವಿಯಲ್ಲಿ ಸ್ಥಾಪನೆಗೊಂಡಿದ್ದು ವಾರ್ಡ್‌ನ ಅಂದಾಜು 52000 ಜನಸಂಖ್ಯೆಗೆ ಹಾಗೂ ಸುತ್ತಲಿನ ಪ್ರದೇಶಗಳಾದ ಹನುಮಂತನಗರ, ಶ್ರೀನಗರ, ಚಾಮರಾಜಪೇಟೆ, ಅವಲಹಳ್ಳಿ ವಾರ್ಡ್‌ಗಳ (ಒಟ್ಟು ಅಂದಾಜು 2 ಲಕ್ಷ ಜನ ಸಂಖ್ಯೆಗೆ) ಸಾರ್ವಜನಿಕರಿಗೆ ಆರೋಗ್ಯ ಸೇವೆಯನ್ನು ನೀಡಲಾಗುತ್ತಿದೆ.

ಸದರಿ ಹೆರಿಗೆ ಆಸ್ಪತ್ರೆಯ ವ್ಯಾಪ್ತಿಯಲ್ಲಿ ಕಡು ಬಡವರೇ ಹೆಚ್ಚಿನ ಸಂಖ್ಯೆಯಲ್ಲಿದ್ದು, ಜೊತೆಗೆ 2 ಸ್ಲಮ್ ಪ್ರದೇಶಗಳು ಇದ್ದು ಅಂದಾಜು 3000 ಜನ ಸಂಖ್ಯೆ ಹೊಂದಿರುತ್ತದೆ. ಸದರಿ ಹೆರಿಗೆ ಆಸ್ಪತ್ರೆಯಲ್ಲಿ ಇಲ್ಲಿಯವರೆವಿಗೂ ಸಹಜ ಹೆರಿಗೆಗಳ ಸೇವೆಯನ್ನು ಮಾತ್ರ ನೀಡಲಾಗುತ್ತಿದ್ದು ತಜ್ಞ ವೈದ್ಯರ ಕೊರತೆಯಿಂದ 24/7 ಸೇವೆ ನೀಡಲು ಸಾಧ್ಯವಾಗಿರುವುದಿಲ್ಲ ಮತ್ತು ಹೆರಿಗೆಗಳ ಸಂಖ್ಯೆ ಒಂದು ಅಂಕಿಯಲ್ಲಿರುತ್ತದೆ(ಪ್ರಗತಿ ಲಗತ್ತಿಸಿದೆ).

ಗವಿಪುರಂ ಗುಟ್ಟಹಳ್ಳಿ ಹೆರಿಗೆ ಆಸ್ಪತ್ರೆಯು ಕೋವಿಡ್-2ನೇ ಅಲೆಯಲ್ಲಿ ಕೋವಿಡ್ ಆರೈಕೆ ಕೇಂದ್ರವಾಗಿ ಪರಿವರ್ತಿಸಲಾಗಿರುತ್ತದೆ ಮತ್ತು 2020-21ರ ಅವಧಿಯಲ್ಲಿ ಹೆರಿಗೆ ಸೇವೆಯನ್ನು ಸ್ಥಗಿತಗೊಳಿಸಲಾಗಿರುತ್ತದೆ. ತದನಂತರ ಹೆರಿಗೆ ಸೇವೆಗಳನ್ನು ಪ್ರಾರಂಬಿಸಲಾಗಿದ್ದು 24/7 ಸೇವೆಗಳನ್ನು ನೀಡಲು ತಜ್ಞ ವೈದ್ಯರ ಕೊರತೆಯಿಂದ ಗರ್ಭಿಣಿ ಸ್ತ್ರೀಯರನ್ನು ಬೇರ ಕೇಂದ್ರಗಳಿಗೆ ರೆಫರ್ ಮಾಡಲಾಗುತ್ತಿದ್ದು, ಪ್ರಸ್ತುತ ನವೀಕರಣ/ದುರಸ್ಥಿ ಕಾಮಗಾರಿಗಳಿಗಾಗಿ ತಾತ್ಕಾಲಿಕವಾಗಿ ಮುಚ್ಚಲ್ಪಟ್ಟಿದೆ.

ಸದರಿ ಹೆರಿಗೆ ಆಸ್ಪತ್ರೆಯನ್ನು One Point Delivery Service centre ಆಗಿ ಪರಿವರ್ತಿಸಿ 24/7 ತಜ್ಞ ವೈದ್ಯರ ಸೇವೆಗಳನ್ನು ನೀಡಲು SOUTH BANGALORE OBGYN DOCTORS and ASSOCIATES ರವರು ದಿನಾಂಕ: 21/04/2022 ರಂದು ಮನವಿ ಪತ್ರ ನೀಡಿದ್ದು ಬಡತನ ರೇಖೆಗಿಂತ ಕೆಳಗಿರುವ ಸಾರ್ವಜನಿಕರಿಗೆ ಜೊತೆಗೆ ಸುತ್ತಮುತ್ತಲಿನ ಪ್ರದೇಶದ ಸ್ಲಂ (ಕೊಳಚೆ ಪ್ರದೇಶ) ನಿವಾಸಿಗಳು ವಿಶೇಷವಾಗಿ ತಾಯಿ ಮಕ್ಕಳ ಆರೋಗ್ಯ ರಕ್ಷಣೆಗಾಗಿ ಸಹಜ ಹೆರಿಗೆಗಳು ಹಾಗೂ ಸಿಸೇರಿಯನ್ ಶಸ್ತ್ರಚಿಕಿತ್ಸೆ ಇತ್ಯಾದಿ., ಸೇವೆಗಳನ್ನು 24/7 ಉಚಿತವಾಗಿ ನೀಡಲು ಪಾಲಿಕೆಗೆ ಮನವಿ ಸಲ್ಲಿಸಿರುತ್ತಾರೆ.

**SOUTH BANGALORE OBGYN DOCTORS and ASSOCIATES ಸಂಸ್ಥೆಯ ವಿಶೇಷತೆಗಳು:**

- SOUTH BANGALOREOBGYN DOCTORS and ASSOCIATES ಸಂಸ್ಥೆಯ 2007ನೇ ಇಸವಿಯಲ್ಲಿ ಸ್ಥಾಪನೆಗೊಂಡಿದ್ದು, ತಾಯಿ ಮತ್ತು ಮಕ್ಕಳ ರಕ್ಷಣೆಯನ್ನು ಮೂಲ ಉದ್ದೇಶವಾಗಿ ಇಟ್ಟುಕೊಂಡಿರುತ್ತದೆ.

- ಸದರಿ ಸಂಸ್ಥೆಯಲ್ಲಿ 10 ನುರಿತ ಅನುಭವಿ ಪ್ರಸೂತಿ ಮತ್ತು ಸ್ತ್ರೀ ರೋಗ ತಜ್ಞರಿದ್ದು ಸಂಸ್ಥೆಯ ವತಿಯಿಂದ ಒಂದು ವರ್ಷಕ್ಕೆ ಸುಮಾರು 1500 ಸಹಜ ಹೆರಿಗೆಗಳು ಮತ್ತು 700–800 ಶಸ್ತ್ರಚಿಕಿತ್ಸೆಗಳು, 22000 ಹೊರರೋಗಿಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ.
- ಸದರಿ ಸಂಸ್ಥೆಯ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ತರಬೇತಿಯನ್ನು ಸಹ ನೀಡುತ್ತಿದ್ದು, ಹಲವಾರು ಕಾರ್ಯಕ್ರಮಗಳನ್ನು ಸಹ ನಡೆಸಿಕೊಂಡು ಬಂದಿರುತ್ತಾರೆ.
- SOUTH BANGALORE OBGYN DOCTORS and ASSOCIATES ಸಂಸ್ಥೆಯವರು ವಿವಿಧ ತಜ್ಞ ವೈದ್ಯರ ಸೇವೆಗಳನ್ನು ನೀಡುತ್ತಿದ್ದು ಆರ್ಥಿಕವಾಗಿ ದುರ್ಬಲರಿಗೆ ಮತ್ತು ಕೆಳ ವರ್ಗದ ಮಹಿಳೆಯರಿಗೆ ಆರೋಗ್ಯ ಶಿಭಿರಗಳನ್ನು ಸಹ ನಡೆಸಿಕೊಂಡು ಬಂದಿರುತ್ತಾರೆ.
- ಸದರಿ ಸಂಸ್ಥೆಯವರು ಪಾಲಿಕೆಯ ಎನ್‌ಆರ್ ಕಾಲೋನಿ ಹೆರಿಗೆ ಆಸ್ಪತ್ರೆಯಲ್ಲಿ 2014 ರಿಂದ 2017 ರವರೆಗೆ ಒಪ್ಪಂದದ ಅಡಿಯಲ್ಲಿ OBG ತಜ್ಞರ ಸೇವೆಗಳನ್ನು ಈಗಾಗಲೇ ನೀಡಿದ್ದು, ಇದರಿಂದ ಹೆರಿಗೆಯ ಪ್ರಮಾಣ ಗಣನೀಯವಾಗಿ ಹೆಚ್ಚಳವಾಗಿರುತ್ತದೆ (ಪ್ರಗತಿ ಲಗತ್ತಿಸಿದೆ). ಮತ್ತು ಸದರಿ ಆಸ್ಪತ್ರೆಯ ಸಿಬ್ಬಂದಿಗಳಿಗೆ ತುರ್ತು ಸಂದರ್ಭಗಳ ನಿರ್ವಹಣೆಯ ಬಗ್ಗೆ ತರಬೇತಿಯನ್ನು ಸಹ ನೀಡಿರುತ್ತಾರೆ. ಇದು ಸೇವೆಗಳ ಗುಣಮಟ್ಟ ಹೆಚ್ಚಿಸುವಲ್ಲಿ ಸಹಕಾರಿಯಾಗಿದೆ.
- ಆದ್ದರಿಂದ, ಪ್ರಸ್ತುತ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಜಂಟಿ ಸಮನ್ವಯದೊಂದಿಗೆ ಉಚಿತ ವಿವಿಧ ಚಿಕಿತ್ಸೆಗಳನ್ನು ಪ್ರಸೂತಿ ತಜ್ಞ ವೈದ್ಯರ ಮೂಲಕ ಸದರಿ ಆಸ್ಪತ್ರೆಯಲ್ಲಿ 24/7 ಒದಗಿಸುವ ಬಗ್ಗೆ ಪ್ರಸ್ತಾಪಿಸಿರುತ್ತಾರೆ.

**ಸದರಿ ಸಂಸ್ಥೆಯೊಡನೆ ಒಪ್ಪಂದ ಮಾಡಿಕೊಳ್ಳಲು ಪಾಲಿಕೆ ಇಚ್ಚಿಸಿರುವುದರಿಂದ ಒಪ್ಪಂದದ ಕರಾರು ಈ ಕೆಳಕಂಡಂತೆ ಇರುತ್ತದೆ.**

## ಒಪ್ಪಂದದ ಕರಾರು

**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಗವೀಪುರಂ ಗುಟ್ಟಹಳ್ಳಿ ಹೆರಿಗೆ ಆಸ್ಪತ್ರೆಯಲ್ಲಿ ಸೇವೆಗಳನ್ನು ಬಲಪಡಿಸಲು ಒಪ್ಪಂದದ ಬಗ್ಗೆ.**

**ಸದರಿ ಜಂಟಿ ಸಹಭಾಗಿತ್ವದ ಒಪ್ಪಂದದ ಪಕ್ಷದಾರರ ವಿವರಗಳು:**

| ಮೊದಲನೇ ಪಕ್ಷದಾರರು | ಎರಡನೇ ಪಕ್ಷದಾರರು |
|---|---|
| ಮುಖ್ಯ ಆರೋಗ್ಯಾಧಿಕಾರಿಗಳು(ಕ್ಲಿನಿಕಲ್) | ನಿರ್ದೇಶಕರು |
| ಎನ್.ಆರ್ ವೃತ್ತ ಬೆಂಗಳೂರು 02 | ಸೌತ್ ಬೆಂಗಳೂರು ಓಬಿಗೈನ್‌ಡಾಕ್ಟರ್& ಆಸೋಸಿಯೇಟ್ಸ್ |
| ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ | ನಂ.50,4ನೇ ಮುಖ್ಯರಸ್ತೆ, ಚಾಮರಾಜಪೇಟೆ ಬೆಂಗಳೂರು-18 |

**ಸದರಿ ಒಪ್ಪಂದದ ಉದ್ದೇಶ:**

**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಗವಿಪುರಂ ಗುಟ್ಟಹಳ್ಳಿ ಹೆರಿಗೆ ಆಸ್ಪತ್ರೆಯಲ್ಲಿ ಹೆಚ್ಚುವರಿಯಾಗಿ ಪ್ರಸೂತಿ ಹಾಗೂ ಸ್ತ್ರೀರೋಗ ತಜ್ಞರ ಸೇವೆಗಳನ್ನು 24/7 ಒದಗಿಸಿ ತಾಯಿ ಮತ್ತು ಮಕ್ಕಳ ಆರೋಗ್ಯ ಸಂರಕ್ಷಣೆ ಬಲಪಡಿಸುವುದು ಸದರಿ ಒಪ್ಪಂದದ ಅಡಿಯಲ್ಲಿ ಎಲ್ಲ ಸೇವೆಗಳು ಉಚಿತವಾಗಿರುತ್ತದೆ.**

## ಅನುಚ್ಛೇದ-1

**ಸೇವೆಗಳ ವ್ಯಾಪ್ತಿ**

- 24/7 ಸಹಜ ಹೆರಿಗೆ, ಸಿಸೇರಿಯನ್, ಸಂತಾನಹರಣ ಶಸ್ತ್ರಚಿಕಿತ್ಸೆಗಳು, ಇನ್ನಿತರೇ ಸ್ತ್ರೀರೋಗ ಶಸ್ತ್ರಚಿಕಿತ್ಸೆಗಳು ಹಾಗೂ ಬಂಜೆತನ ನಿವಾರಣಾ ಸೇವೆಗಳನ್ನು ಒದಗಿಸುವುದು.
- ನುರಿತ ಪ್ರಸೂತಿ ಮತ್ತು ಸ್ತ್ರೀ ರೋಗತಜ್ಞರಿಂದ ಉಚಿತವಾಗಿ 24/7 ಸೇವೆಗಳನ್ನು ಒದಗಿಸುವುದು.

- ಹೆರಿಗೆ ಆಸ್ಪತ್ರೆಯ ಸುತ್ತಲಿನ ಪ್ರದೇಶದಲ್ಲಿನ ಬಡವರು ಮತ್ತು ಕೊಳಚೆ ಪ್ರದೇಶ ನಿವಾಸಿಗಳಿಗೆ ಉತ್ತಮ ಗುಣಮಟ್ಟದ ಸೇವೆಗಳನ್ನು ಉಚಿತವಾಗಿ ಒದಗಿಸುವುದು.
- ಸದರಿ ಹೆರಿಗೆ ಆಸ್ಪತ್ರೆಯನ್ನು One Point Solution Delivery centre ಯಾಗಿ ಪರಿವರ್ತಿಸಿ ರೆಫರಲ್ ಪ್ರಮಾಣವನ್ನು ತಗ್ಗಿಸುವುದು.
- ಹೆರಿಗೆ ಸೇವೆಗಳ ಜೊತೆಗೆ ಮಹಿಳೆಯರಿಗೆ ಇನ್ನಿತರೇ ವಿಶೇಷ ಆರೋಗ್ಯ ಸೇವೆಗಳನ್ನು ನುರಿತ ತಜ್ಞ ವೈದ್ಯರಿಂದ ನೀಡುವುದು.
- ನೀಡುವ ಎಲ್ಲಾ ಸೇವೆಗಳು ಉಚಿತವಾಗಿರುತ್ತದೆ.

## ಅನುಚ್ಛೇದ-2

**ಒಪ್ಪಂದದ ಅವಧಿ:-**

ಒಪ್ಪಂದ ಸಹಿಯಾದ ದಿನಾಂಕದಿಂದ 2 ವರ್ಷದ ಅವಧಿಗೆ ಸೀಮಿತವಾಗಿರುತ್ತದೆ. ಒಂದು ವರ್ಷದ ನಂತರ ಉಸ್ತುವಾರಿ ಸಮಿತಿಯು ಶಿಫಾರಸ್ಸು ಮಾಡಿದ್ದಲ್ಲಿ 2ನೇ ವರ್ಷಕ್ಕೆ ಸೇವೆಗಳನ್ನು ಮುಂದುವರಿಸಲಾಗುವುದು.

## ಅನುಚ್ಛೇದ-3

**ಉಭಯ ಪಕ್ಷದಾರರ ಜವಾಬ್ದಾರಿಗಳು.**

**I. ಮೊದಲನೇ ಪಕ್ಷದಾರರು [ಮುಖ್ಯ ಆರೋಗ್ಯಾಧಿಕಾರಿಗಳು(ಕ್ಲಿನಿಕಲ್), ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ]**

- ಪಾಲಿಕೆಯ ಗವೀಪುರಂ ಗುಟ್ಟಹಳ್ಳಿ ಹೆರಿಗೆ ಆಸ್ಪತ್ರೆಯ ಆಡಳಿತಾತ್ಮಕ ನಿರ್ವಹಣೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಜವಾಬ್ದಾರಿಯಾಗಿರುತ್ತದೆ.

- ಸದರಿ ಒಪ್ಪಂದದ ಅನುಸಾರ ಪಾಲಿಕೆಯ ವಾರ್ಡ 142ರಲ್ಲಿ ಕಾರ್ಯನಿರ್ವಹಿಸುತ್ತಿರುವ ಗವೀಪುರಂ ಗುಟ್ಟಹಳ್ಳಿ ಹೆರಿಗೆ ಆಸ್ಪತ್ರೆಯ ಕಟ್ಟಡವನ್ನು ನೀಡಲಾಗುತ್ತದೆ ಹಾಗೂ ಮೂಲಭೂತ ಸೌಕರ್ಯಗಳಾದ ವಿದ್ಯುಚ್ಛಕ್ತಿ, ನೀರು ಸರಬರಾಜು, ದೂರವಾಣಿ ವ್ಯವಸ್ಥೆ, ಅಂತರ್ಜಾಲ ವ್ಯವಸ್ಥೆಗಳನ್ನು, ತುರ್ತುವಾಹನದ ಸೇವೆಗಳು ಪಾಲಿಕೆಯ ವತಿಯಿಂದ ನಿರ್ವಹಿಸಲಾಗುತ್ತದೆ.

- ಸದರಿ ಆಸ್ಪತ್ರೆಗೆ ಅವಶ್ಯವಿರುವ ಪ್ರಸೂತಿತಜ್ಞರು ಮತ್ತು ಸ್ತ್ರೀರೋಗ ತಜ್ಞರನ್ನು SOUTH BANGALOREOBGYN DOCTORS and ASSOCIATES ರವರೇ ನಿಯೋಜಿಸಿಕೊಂಡು, ಉಳಿದಂತೆ ಮಕ್ಕಳ ತಜ್ಞರು, ಅರೆವಳಿಕೆ ತಜ್ಞರು, ಅರೆವೈದ್ಯಕೀಯ ಸಿಬ್ಬಂದಿ, ಸ್ವಚ್ಛತಾ ಸಿಬ್ಬಂದಿ, ಭದ್ರತಾ ಸಿಬ್ಬಂದಿ, ನಾಲ್ಕನೇ ದರ್ಜೆ ನೌಕರರ ಸೇವೆಗಳನ್ನು ಪಾಲಿಕೆಯ ವತಿಯಿಂದ ನೀಡಲಾಗುವುದು.

- ಸೇವಾ ಸೌಲಭ್ಯಗಳನ್ನು ನೀಡಲು ಅವಶ್ಯವಿರುವ ವಿವಿಧ ಯಂತ್ರೋಪಕರಣಗಳು ಹಾಗೂ ಪೀಠೋಪಕರಣಗಳನ್ನು ಪಾಲಿಕೆಯ ವತಿಯಿಂದ ನೀಡಿ ನಿರ್ವಹಿಸಲಾಗುವುದು.

**II. ಎರಡನೇ ಪಕ್ಷದಾರರು[ನಿರ್ದೇಶಕರು, ಸೌತ್ ಬೆಂಗಳೂರು ಓಬಿಗೈನ್ ಡಾಕ್ಟರ್& ಅಸೋಸಿಯೇಟ್ಸ್ ಸಂಸ್ಥೆ]**

- ಸದರಿ ಸಂಸ್ಥೆಯಿಂದ ನಿಯೋಜಿತರಾಗುವ ತಜ್ಞ ವೈದ್ಯರು ಹಾಗು ಶುಶ್ರೂಷಕಿಯರು ಗವೀಪುರಂ ಗುಟ್ಟಹಳ್ಳಿ ಹೆರಿಗೆ ಆಸ್ಪತ್ರೆಯಲ್ಲಿ ಹಾಜರಾತಿ ಪುಸ್ತಕವನ್ನು ನಿರ್ವಹಿಸತಕ್ಕದ್ದು.
- ಈ ಒಡಂಬಡಿಕೆಯ ಅಡಿಯಲ್ಲಿ ನುರಿತ Registered ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞರನ್ನು ಪ್ರತಿ ದಿನ ನಿಯೋಜಿಸಲಾಗುವುದು. ಪ್ರತಿ ಮಾಹೆಗೆ ಮುಂಚಿತವಾಗಿ ತಜ್ಞ ವೈದ್ಯರ ಹೆಸರಿನ ಡ್ಯೂಟಿ ರೋಸ್ಟರ್ ನೀಡುವುದು. ಈ ವೈದ್ಯರುಗಳು SOUTH BANGALORE OBGYN DOCTORS and ASSOCIATES ಸಂಸ್ಥೆಯವರ ಮಾರ್ಗದರ್ಶನದಲ್ಲಿ ಪಾಲಿಕೆಯಲ್ಲಿ ಅನುಸರಿಸುತ್ತಿರುವ ಕ್ರಮ ಪದ್ಧತಿಗಳ ಅನುಸಾರ ಹೆರಿಗೆ ಮತ್ತು ಶಸ್ತ್ರಚಿಕಿತ್ಸೆ ಸೇವೆಗಳನ್ನು ನೀಡುವುದು.
- ಗರ್ಭಿಣಿ ಮತ್ತು ಸ್ತ್ರೀರೋಗಗಳ ತಪಾಸಣೆ & ಹೊರ ರೋಗಿಗಳ ಚಿಕಿತ್ಸೆ

- SOUTH BANGALORE OBGYN DOCTORS and ASSOCIATES ಸಂಸ್ಥೆಯ ವತಿಯಿಂದ ವೈದ್ಯರ ತಂಡವು 24*7 rotation ನಲ್ಲಿ ಕಾರ್ಯನಿರ್ವಹಿಸುತ್ತಾರೆ.
- ಸದರಿ ಸಂಸ್ಥೆಯಿಂದ ನಿಯೋಜಿತರಾದ ತಜ್ಞ ವೈದ್ಯರುಗಳು ನಿರ್ವಹಿಸಿರುವ ಶಸ್ತ್ರ ಚಿಕಿತ್ಸೆಗಳ, ಹೆರಿಗೆಗಳು surgical procedures ಹಾಗೂ ಅದರಿಂದ ಉಂಟಾಗಬಹುದಾದ ಪರಿಣಾಮಗಳಿಗೆ ಸದರಿ ಸಂಸ್ಥೆರವರೇ ನೇರ ಜವಾಬ್ದಾರರು.
- ಸದರಿ ಸಂಸ್ಥೆಯಿಂದ ನೀಡುವ ಹಾಗೂ ನಿರ್ವಹಿಸುವ ಎಲ್ಲಾ ಸೇವೆಗಳು ಉಚಿತವಾಗಿರುತ್ತವೆ.
- ಸಹಜ ಪ್ರಸವ ಮತ್ತು ಕ್ಲಿಷ್ಟಕರ ಹೆರಿಗೆಗಳ ಸೇವೆಗಳು
- ಶಸ್ತ್ರಚಿಕಿತ್ಸೆ/ ಸಿಜೇರಿಯನ್ ಹೆರಿಗೆಗಳು ಮತ್ತು ಇತರೆ ಸ್ತ್ರೀರೋಗಕ್ಕೆ ಸಂಬಂಧಿಸಿದ ಶಸ್ತ್ರ ಚಿಕಿತ್ಸೆಗಳು
- ಸಂತಾನ ಹರಣ ಉದರದರ್ಶಕ ಚಿಕಿತ್ಸೆ ಮತ್ತು ಟುಬೆಕ್ಟಮಿ ಶಸ್ತ್ರ ಚಿಕಿತ್ಸೆಗಳು (ವೈದ್ಯರು ಭಾರತ ಸರ್ಕಾರದಿಂದ ಮಾನ್ಯತೆ ಪಡೆದ ಆಸ್ಪತ್ರೆಯಿಂದ ತರಬೇತಿ ಪಡೆದಿದ್ದು, ಸರ್ಟಿಫಿಕೇಟ್ ಹೊಂದಿದ್ದು, Empanelment of doctors for conducting surgical procedure ನಲ್ಲಿ ನೊಂದಣಿಯಾಗಿರಬೇಕು)
- ಆರ್ಬುದ ಕಾಯಿಲೆ ತಪಾಸಣೆ ಮತ್ತು ಚಿಕಿತ್ಸೆ.
- ಪಾಲಿಕೆಯ ವೈದ್ಯರಿಗೆ CME ಗಳನ್ನು ಏರ್ಪಡಿಸುವುದು.
- ತಮ್ಮ ಕಾರ್ಯಕ್ರಮಗಳನ್ನು ಜಾಹಿರಾತುಗಳ ಮೂಲಕ ತಿಳಿಯಪಡಿಸುವುದು.

## ಅನುಚ್ಛೇದ-4

ಇನ್ನಿತರೇ ವಿಶೇಷ ಸೇವೆಗಳು:-

ಎರಡನೇ ಪಕ್ಷದಾರರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಚಿಹ್ನೆಯ ಅಡಿಯಲ್ಲಿ ಪ್ರೋಟೋಕಾಲ್ ಗಳನ್ನು ಅನುಸರಿಸಿ ಎಲ್ಲಾ ರಾಷ್ಟ್ರೀಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಸಕ್ರಿಯ ಪಾತ್ರವಹಿಸಿ ಕರ್ತವ್ಯ ನಿರ್ವಹಿಸುವುದು.

- OPD Services Between 9 am and 4 pm Sundays and Govt Holidays 9am to 1 pm
- High Risk ಗರ್ಭಿಣಿ ಸ್ತ್ರೀಯರ ತಪಾಸಣೆ (ಸಕ್ಕರೆ ಕಾಯಿಲೆ, ರಕ್ತದ ಒತ್ತಡ/PIH ಇತ್ಯಾದಿ), ಚಿಕಿತ್ಸೆ ಹಾಗೂ ಅವರಿಗೆ ಹೆರಿಗೆ ಸೇವೆಗಳು.
- 24/7 Emergencies, Delivery and Operative Care
- ಡಿ & ಸಿ ಮತ್ತು ಎಂ.ಟಿ.ಪಿ ಸೇವೆಗಳು
- ಕಾಲ್‌ಪೋಸ್ಕೋಪಿ ಕ್ಲಿನಿಕ್
- Infertility Clinic(ಬಂಜೆತನ ನಿವಾರಣ ಕ್ಲಿನಿಕ್)
- ಎಲ್ಲಾ ರಾಷ್ಟ್ರೀಯ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸುವುದು.
- ಎರಡನೇ ಪಕ್ಷದಾರರು ಪಾಲಿಕೆಯ ನಿಯಮಗಳಿಗೆ ಬದ್ಧರಾಗಿರುವುದು.
- ಎರಡನೇ ಪಕ್ಷದಾರರು ಪಾಲಿಕೆಯ ವೈದ್ಯರು ಮತ್ತು ಶುಶ್ರೂಷಕಿಯರಿಗೆ ಹೆರಿಗೆಗೆ ಸಂಬಂಧಿಸಿದ ತುರ್ತು ಸಂದರ್ಭಗಳನ್ನು ಕಂಡು ಹಿಡಿಯುವಿಕೆ, ತುರ್ತುಚಿಕಿತ್ಸೆ ಇತ್ಯಾದಿಗಳ ಬಗ್ಗೆ Drilling ಸಹಿತ ತರಬೇತಿ ಕಾರ್ಯಕ್ರಮ ಕಾಲಕಾಲಕ್ಕೆ ನಡೆಸಿಕೊಡುವುದು.
- Well Women ಕ್ಲಿನಿಕ್
- ಗುಣಮಟ್ಟದ ಸೇವೆಗಳಿಗಾಗಿ ಸರ್ಕಾರದ ಲಕ್ಷ್ಯ/NQAS/ಕಾಯಕಲ್ಪ ಇತ್ಯಾದಿ ಕಾರ್ಯಕ್ರಮಗಳ ಮಾರ್ಗಸೂಚಿಗಳನ್ವಯ ಸೇವೆಗಳನ್ನು ನೀಡಿ ತತ್ಸಂಬಂಧ ದಾಖಲಾತಿ ನಿರ್ವಹಿಸುವುದು.

## ಅನುಚ್ಛೇದ-5

<u>ಉಭಯ ಪಕ್ಷದಾರರ ಹಕ್ಕುಗಳು ಮತ್ತು ನಿಬಂಧನೆಗಳು:</u>

- ಪಾಲಿಕೆಯ ಗವೀಪುರಂ ಗುಟ್ಟಹಳ್ಳಿ ಹೆರಿಗೆ ಆಸ್ಪತ್ರೆಗೆ ಸಂಬಂಧಿಸಿದ ವಿಷಯಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ತಿಳಿಸದೇ ಮೂರನೇ ವ್ಯಕ್ತಿಗಳ ಹತ್ತಿರ ಚರ್ಚಿಸಬಾರದು (ಗೌಪ್ಯತೆಯನ್ನು ಕಾಪಾಡುವುದು)
- SOUTH BANGALORE OBGYN DOCTORS and ASSOCIATES ಸಂಸ್ಥೆಯ ವೈದ್ಯರು ಅವರು ನೀಡಿದ ಚಿಕಿತ್ಸೆಯ ದಾಖಲೆಗಳನ್ನು ಹಾಗೂ ಸದರಿ ಆಸ್ಪತ್ರೆಯ ಇನ್ನಿತರೇ ಅವಶ್ಯಕ ದಾಖಲೆಗಳನ್ನು ನಿಯಮಾನುಸಾರ ನಿರ್ವಹಿಸತಕ್ಕದ್ದು.
- SOUTH BANGALORE OBGYN DOCTORS and ASSOCIATES ಸಂಸ್ಥೆಯವರಿಗೆ ನೀಡಿರುವ ಅಧಿಕಾರವನ್ನು ಮೂರನೇ ಪಕ್ಷದಾರರಿಗೆ ಪಾಲಿಕೆಯ ಮೇಲಾಧಿಕಾರಿಗಳ ಗಮನಕ್ಕೆ ತರದೇ ನೀಡುವಂತಿಲ್ಲ.
- SOUTH BANGALORE OBGYN DOCTORS and ASSOCIATES ಸಂಸ್ಥೆಯ ವೈದ್ಯರು 24/7 ನಿರ್ವಹಿಸಿರುವ ಹೆರಿಗೆಗಳು ಮತ್ತು ಶಸ್ತ್ರಚಿಕಿತ್ಸೆಗಳಿಗೆ ಸಂಬಂಧಿಸಿದಂತೆ, ಏನಾದರೂ ತೊಂದರೆ ಉಂಟಾದಲ್ಲಿ ಸದರಿ ಸಂಸ್ಥೆಯ ವೈದ್ಯರುಗಳೇ ಸಂದರ್ಭಕ್ಕೆ ಅನುಗುಣವಾಗಿ ಬಂದು ನಿರ್ವಹಿಸತಕ್ಕದ್ದು.
- ಗವೀಪುರಂ ಗುಟ್ಟಹಳ್ಳಿ ಹೆರಿಗೆ ಆಸ್ಪತ್ರೆಯ ವೈದ್ಯರುಗಳೊಂದಿಗೆ ಸಮನ್ವಯದೊಂದಿಗೆ ಕರ್ತವ್ಯ ನಿರ್ವಹಿಸುವುದು.
- ಸದರಿ ಒಪ್ಪಂದವು ಸಾರ್ವಜನಿಕ ಹಿತಾಸಕ್ತಿಯನ್ನೆ ಮೂಲ ಉದ್ದೇಶವಾಗಿ ಇಟ್ಟುಕೊಂಡಿರುವುದರಿಂದ ಉಭಯ ಪಕ್ಷದಾರರು ಈ ಸಂಬಂಧ ಸಹಕರಿಸುವುದು.
- ಉಭಯ ಪಕ್ಷದಾರರು ಪರಸ್ಪರ ಗೌರವದಿಂದ ಹೊಂದಾಣಿಕೆ ಮಾಡಿಕೊಂಡು ಸೇವೆಗಳನ್ನು ನೀಡುವುದು.
- Option of Renewal to be kept open.

## ಅನುಚ್ಛೇದ-6

**ರೆಫರಲ್ ಸೇವೆಗಳು:**

- SOUTH BANGALORE OBGYN DOCTORS and ASSOCIATES ನ ವೈದ್ಯರುಗಳು ಹೆರಿಗೆಗಳು ಮತ್ತು ಶಸ್ತ್ರಚಿಕಿತ್ಸೆಗಳ ಸೇವೆಗಳನ್ನು ನೀಡುವಾಗ ಉದ್ಭವಿಸುವ ತುರ್ತು ಸಂದರ್ಭಗಳಲ್ಲಿ ಗವೀಪುರಂ ಗಟ್ಟಹಳ್ಳಿ ಹೆರಿಗೆ ಆಸ್ಪತ್ರೆಯ ವೈದ್ಯರುಗಳಿಗೆ ತಿಳಿಸಿ ರೋಗಿಯ ಅಥವಾ ರೋಗಿಯ ಸಂಬಂಧಿಕರ ಒಪ್ಪಿಗೆ ಪಡೆದು ಸರ್ಕಾರಿ ಮೇಲ್ದರ್ಜೆ ಆಸ್ಪತ್ರೆಗಳಿಗೆ ರವಾನಿಸುವುದು.

**ವರದಿಗಳ ಸಲ್ಲಿಕೆ:**

- ಎರಡನೇ ಪಕ್ಷದಾರರು ರೋಗಿಗಳ ತಪಾಸಣೆ/ಚಿಕಿತ್ಸೆ ಇತ್ಯಾದಿಗಳಿಗೆ ವಿವಿಧ ಸಂಭಂದಪಟ್ಟ ದಾಖಲಾತಿಗಳನ್ನು ಪಾಲಿಕೆಯ ನಿಯಮಗಳಂತೆ ನಿರ್ವಹಿಸಬೇಕಾಗಿರುತ್ತದೆ ಹಾಗೂ ಆಡಳಿತ ವೈದ್ಯಾಧಿಕಾರಿಗಳಿಗೆ ವಾರ/ಮಾಸಿಕ /ವಾರ್ಷಿಕ ವರದಿ ಸಲ್ಲಿಸತಕ್ಕದ್ದು. ಆಡಳಿತ ವೈದ್ಯಾಧಿಕಾರಿಗಳು ಪರಿಶೀಲಿಸಿ, ಸಹಿಯೊಂದಿಗೆ ವೈದ್ಯಕೀಯ ಅಧೀಕ್ಷಕರಿಗೆ ಸಲ್ಲಿಸುವುದು.
- ಎಲ್ಲಾ ರಾಷ್ಟ್ರೀಯ ಕಾರ್ಯಕ್ರಮಗಳ ಪ್ರಗತಿಯನ್ನು ಆಯಾ ನಮೂನೆಗಳಲ್ಲಿ ವರದಿ ನೀಡುವುದು.

**ಮೇಲ್ವಿಚಾರಣೆ:**

- ಗವೀಪುರಂ ಗುಟ್ಟಹಳ್ಳಿ ಹೆರಿಗೆ ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿಗಳ ಸಮನ್ವಯದೊಂದಿಗೆ SOUTH BANGALORE OBGYN DOCTORS and ASSOCIATES ಸಂಸ್ಥೆಯ ತಜ್ಞ ವೈದ್ಯರೊಂದಿಗೆ ಹಾಗೂ ವಲಯದ ವೈದ್ಯಕೀಯ ಅಧೀಕ್ಷಕರ ಅಧೀನದಲ್ಲಿ ನೀಡುವ ಸೂಚನೆಗಳನ್ನು ಪಾಲಿಸುವುದು,
- ಸದರಿ ಆಸ್ಪತ್ರೆಯ ಎಲ್ಲಾ ಚಟುವಟಿಕೆಗಳನ್ನು (ಆಡಳಿತ ಮತ್ತು ಕ್ಲಿನಿಕಲ್) ಈ ಕೆಳಕಂಡ ಉಸ್ತುವಾರಿ ಸಮಿತಿಯು ಪರಿಶೀಲಿಸುವುದು.

- ಉಸ್ತುವಾರಿ ಸಮಿತಿಯಲ್ಲಿ ಇರುವ ಸದಸ್ಯರುಗಳು :-

| | |
|---|---|
| ಮಾನ್ಯ ಶಾಸಕರು (ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರ) | : ಅಧ್ಯಕ್ಷರು |
| ಬೃ.ಬೆಂ.ಮ.ಪಾಲಿಕೆ ಸದಸ್ಯರು (ವಾರ್ಡ್-142) | : ಸದಸ್ಯರು |
| ಮುಖ್ಯ ಆರೋಗ್ಯಾದಿಕಾರಿಗಳು(ಕ್ಲಿನಿಕಲ್) | : ಸದಸ್ಯರು |
| ಆರೋಗ್ಯಾಧಿಕಾರಿಗಳು (ದಕ್ಷಿಣ) ಕ್ಲಿನಿಕಲ್ | : ಸದಸ್ಯರು |
| ವೈದ್ಯಕೀಯ ಅಧೀಕ್ಷಕರು (ಬ.ರೆ.ಆ) | : ಸದಸ್ಯರು |
| ನಿರ್ದೇಶಕರು, ಸೌತ್ ಬೆಂಗಳೂರು ಓಬಿಗೈನ್ ಡಾಕ್ಟರ್& ಅಸೋಸಿಯೇಟ್ಸ್ ಸಂಸ್ಥೆ | : ಸದಸ್ಯರು |
| ಆಡಳಿತ ವೈದ್ಯಾಧಿಕಾರಿಗಳು (ಗವೀಪುರಂ ಗುಟ್ಟಹಳ್ಳಿ ಹೆರಿಗೆ ಆಸ್ಪತ್ರೆ) | : ಸದಸ್ಯ ಕಾರ್ಯದರ್ಶಿಗಳು |

ಈ ಉಸ್ತುವಾರಿ ಸಮಿತಿಯು ಪ್ರತಿ ಮೂರು ತಿಂಗಳಿಗೊಮ್ಮೆ ಸಭೆ ಸೇರಿ ಗವೀಪುರಂ ಗುಟ್ಟಹಳ್ಳಿ ಹೆರಿಗೆ ಆಸ್ಪತ್ರೆಯಲ್ಲಿ ರೋಗಿಗಳಿಗೆ ದೊರೆಯುತ್ತಿರುವ ಸೇವೆಗಳ ಬಗ್ಗೆ ಪರಿಶೀಲಿಸಿ, ನ್ಯೂನತೆಗಳಿದ್ದಲ್ಲಿ ಕ್ರಮಕೈಗೊಂಡು ಹೆಚ್ಚಿನ ಅಭಿವೃದ್ಧಿಗೆ ಶಿಫಾರಸ್ಸು (Recommendation) ಮಾಡುವುದು.

ಮೇಲ್ಕಂಡ ಒಪ್ಪಂದದ ಕರಾರಿನಲ್ಲಿ ಯಾವುದೇ ರೀತಿಯ ಭಿನ್ನಾಭಿಪ್ರಾಯಗಳು ಉದ್ಭವಿಸಿದಲ್ಲಿ ಮುಖ್ಯ ಆರೋಗ್ಯಾಧಿಕಾರಿಗಳು (ಕ್ಲಿನಿಕಲ್) ರವರ ಮಟ್ಟದಲ್ಲಿ ಚರ್ಚಿಸಿ ಬಗೆಹರಿಸಿಕೊಳ್ಳುವುದು, ಸಿವಿಲ್ ತಕರಾರುಗಳು ಬಂದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಮುಖ್ಯ ಆಯುಕ್ತರವರ ತೀರ್ಮಾನವೇ ಅಂತಿಮವಾಗಿರುತ್ತದೆ. ಯಾವುದೇ ಸಂಧರ್ಭದಲ್ಲೂ ಈ ಒಪ್ಪಂದದ ಕರಾರನ್ನು ರದ್ದುಪಡಿಸುವ ಅಧಿಕಾರವನ್ನು ಪಾಲಿಕೆಯು ಕಾಯ್ದಿರಿಸಿಕೊಂಡಿರುತ್ತದೆ.

ಈ ಹಿನ್ನೆಲೆಯಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ, ವಾರ್ಡ್-142ರಲ್ಲಿ ಕಾರ್ಯನಿರ್ವಹಿಸುತ್ತಿರುವ 24 ಹಾಸಿಗೆಗಳ ಗವೀಪುರಂ ಗುಟ್ಟಹಳ್ಳಿ ಹೆರಿಗೆ ಆಸ್ಪತ್ರೆಗೆ, ಎರಡನೇ ಪಕ್ಷದಾರರಾದ ಸೌತ್ ಬೆಂಗಳೂರು ಓಬಿಗೈನ್ ಡಾಕ್ಟರ್ & ಅಸೋಸಿಯೇಟ್ಸ್ ಸಂಸ್ಥೆಯ ವತಿಯಿಂದ "ಉಚಿತವಾಗಿ" ಪ್ರಸೂತಿ & ಸ್ತ್ರೀರೋಗ ತಜ್ಞ ವೈದ್ಯರ ಸೇವೆಗಳನ್ನು 24/7 ನೀಡಲು ಸದರಿ ಸಂಸ್ಥೆಯವರು ಮುಂದೆ ಬಂದಿದ್ದು, ಒಪ್ಪಂದ ಮಾಡಿಕೊಳ್ಳಲು ಮನವಿ ಪತ್ರ ನೀಡಿರುತ್ತಾರೆ. ಪಾಲಿಕೆ ಹಾಗೂ ಸದರಿ ಸಂಸ್ಥೆಯ ಜಂಟಿ ಸಹಭಾಗಿತ್ವದ ಕ್ಲಿನಿಕಲ್ ನಿರ್ವಹಣೆಯಿಂದ, ಸದರಿ ವಿಧಾನಸಭಾ ಕ್ಷೇತ್ರದ ಕಡು ಬಡವರು, ಕೊಳಚೆ ಪ್ರದೇಶದ ನಿವಾಸಿಗಳಿಗೆ 24/7 ಉತ್ತಮ ಗುಣಮಟ್ಟದ ಸಹಜ ಹೆರಿಗೆ, ಸಿಸೇರಿಯನ್ ಹಾಗೂ ಇನ್ನಿತರೇ ಶಸ್ತ್ರಚಿಕಿತ್ಸೆಗಳ ಸೇವೆಗಳನ್ನು ಉಚಿತವಾಗಿ ನೀಡಿ, ಗವೀಪುರಂ ಗುಟ್ಟಹಳ್ಳಿ ಹೆರಿಗೆ ಆಸ್ಪತ್ರೆಯನ್ನು ಬಲಪಡಿಸಲು ಇಚ್ಛಿಸಿದ್ದು, ಸದರಿ ಎರಡು ವರ್ಷಗಳ ಅವಧಿಯ ಒಪ್ಪಂದದ ಕರಾರನ್ನು ಅನುಮೋದಿಸಲು ಕೋರುತ್ತಾ, ತೆರಿಗೆ ವಿಧಿಸುವಿಕೆ ಮತ್ತು ಹಣಕಾಸು ಮತ್ತು ಅಪೀಲು ಸ್ಥಾಯಿ ಸಮಿತಿ, ಸಾರ್ವಜನಿಕ ಆರೋಗ್ಯ ಘನತ್ಯಾಜ್ಯ ಮತ್ತು ವಿಪತ್ತು ನಿರ್ವಹಣೆ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ತೀರ್ಮಾನಕ್ಕಾಗಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಆರೋಗ್ಯ) ರವರ ದಿನಾಂಕ:15-05-2023ರ ಟಿಪ್ಪಣಿ.

**ತೀರ್ಮಾನ: ವಿಶೇಷ ಆಯುಕ್ತರು (ಆರೋಗ್ಯ) ರವರ ದಿನಾಂಕ:15-05--2023ರ ಟಿಪ್ಪಣಿಯನ್ನು ಒಪ್ಪಿದೆ.**

(ರಾಕೇಶ್ ಸಿಂಗ್)
ಆಡಳಿತಗಾರರು